


ಕಲ್ಯಾಣ ಕಿರಣ

ಅಕ್ಟೋಬರ್-2011 ಬೆಲೆ-10/-









॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಸಂಪುಟ-41	ಬಸವ ಶಕೆ -878	ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-10	ಅಕ್ಟೋಬರ್- 2011	ವಾರ್ಷಿಕ ಚಂದಾ 100 ರೂ.

ಬನ್ನಿ ಕಲ್ಯಾಣ ಪರ್ವಕೆ

ಬನ್ನಿ ಬನ್ನಿ ನೋಡಬನ್ನಿ ಬಸವ ಕಲ್ಯಾಣವ
ಬನ್ನಿ ಬನ್ನಿ ಹಾಡಬನ್ನಿ ಶರಣಸ್ಮರಣ ಗೀತೆಯ ॥ಪ॥

ಗುರು ಬಸವಣ್ಣನ ಕಾರ್ಯಕ್ಷೇತ್ರ ಕಲ್ಯಾಣ
ಮಹಾಮನೆ ಹೊಂದಿದ್ದ ದಿವ್ಯ ತಾಣ ಕಲ್ಯಾಣ
ಅನುಭವ ಮಂಟಪವ ಹೊಂದಿ, ಅಂದು ಮೆರೆದ ಕಲ್ಯಾಣ
ಲಿಂಗದೇವ ಲೀಲೆ ಹಾಡ್ದ ಶರಣ ಭೂಮ್ಮಿ ಕಲ್ಯಾಣ ॥1॥

ಕಲ್ಯಾಣ ಪ್ರಣತೆಯಾಗಿ ಭಕ್ತಿರಸವೆ ತೈಲವಾಗಿ
ಆಚಾರ ಬತ್ತಿಹಿಡಿದು ಬೆಳಗಿತಂದು ಬಸವ ಜ್ಯೋತಿ
ಶಿವನ ಪ್ರಕಾಶದಲಿ ಬಾಳ ಹಣತೆ ಬೆಳಗಿಕೊಂಡು
ಶರಣ ಗಣವು ಕೂಡಿತಂದು ವಚನ ಜೇನು ನೀಡುತಲಿ ॥2॥

ಕಲ್ಯಾಣ ನಾಡಿನಲಿ ಅಂದು ಒಂದು ಕ್ರಾಂತಿಯಾಗಿ
ಧರ್ಮಪಿತರು ನಡೆದರು ಗಡಿಪಾರಿನ ದಂಡಗೊಂಡು
ಹರಳಯ್ಯ-ಮಧುವಯ್ಯ-ಶೀಲವಂತ ಶರಣರು
ಹರಣ ತೆತ್ತು ಹಾಡಿದರು ಬಸವ ತತ್ತ್ವ ಕ್ರಾಂತಿ ಗೀತ ॥3॥

ವಚನ ಸಿರಿಯ ರಕ್ಷಿಸಲು ಶರಣ ಗಣವು ನಿಂತಿತು
ತನುಮನ ಪ್ರಾಣಗಳ ಪಣಕ್ಕಿಟ್ಟು ಹೋರಾಡಿತು
ಹುತಾತ್ಮರಾದ ಶರಣರ ಸಂಕಲ್ಪ ಪೂರೈಸಲು
ಇಂದು ಅವರ ಚೇತನವ ತರುವಾ ಕಲ್ಯಾಣಕೆ ॥4॥

ಆಶ್ವಯುಜ ಪೌರ್ಣಿಮೆಯಂದು ನಡೆಯುತಿದೆ ಕಲ್ಯಾಣ ಪರ್ವ
ನಾಡ ಮೂಲೆ ಮೂಲೆಯಿಂದ ಬನ್ನಿ ಶರಣ ಬಂಧುಗಳೇ
ಬಸವ ಕರುಳ ಕುಡಿಗಳನ್ನು ಬೆಸೆಯುವ ಹಬ್ಬವಿದು
ವಚನ ಪರ್ವ ತತ್ತ್ವ ಪರ್ವ, ಕಮ್ಮನೆಯ ಶರಣ ಪರ್ವ ॥5॥

ತಮಿಳು ನಾಡು, ತೆಲುಗು ನಾಡು, ಮಹಾರಾಷ್ಟ್ರ ಹಿಂದಿನಾಡು
ಕರುನಾಡಿನ ಮೂಲೆಯಿಂದ ಬನ್ನಿರೆಲ್ಲ ಕಲ್ಯಾಣಕೆ
ನಾವು ನೀವು ಎಲ್ಲ ಸೇರಿ ಶರಣರನ್ನು ಸ್ಮರಿಸುವಾ
ಛಲವ ತೊಟ್ಟು ಕಟ್ಟುವಾ ಮತ್ತೆ ನವಕಲ್ಯಾಣ ॥6॥

★ಕಲ್ಯಾಣ ಕಿರಣ★

ಕಿರಣಗನ್ನಡಿ

ಭದ್ರಾವತಿ ರಾಷ್ಟ್ರೀಯ ಬಸವ ದಳದಿಂದ ಆಹ್ವಾನ

ದಿ.11-11-2011ರಂದು ಭದ್ರಾವತಿ ರಾಷ್ಟ್ರೀಯ ಬಸವ ದಳದವರು ನೂತನವಾಗಿ ಕಟ್ಟಿಸಿರುವ "ಬಸವ ಕರುಣಾಶ್ರಯ ಬಡಮಕ್ಕಳ ಉಚಿತ ವಿದ್ಯಾರ್ಥಿ ನಿಲಯ"ದ ಕಟ್ಟಡವನ್ನು ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಸನ್ನಿಧಿಯಲ್ಲಿ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು ಬೆಳಿಗ್ಗೆ10-30ಕ್ಕೆ ಉದ್ಘಾಟಿಸುತ್ತಿದ್ದು ಈ ಸಮಾರಂಭಕ್ಕೆ ಎಲ್ಲ ಶರಣ ಬಂಧುಗಳನ್ನು ಭಾಗವಹಿಸಲು ಆಹ್ವಾನಿಸುತ್ತಿದ್ದೇವೆ.

ದಿ.12ರಂದು ನಂದಿ, ಉಡುತಡಿ, ತರೀಕೆರೆ, ಬಳ್ಳಿಗಾವಿ ಮುಂತಾದ ಶರಣರ ಸ್ಥಾನಗಳ ಸಂದರ್ಶನವಿದೆ. ಬರುವ ಆಸಕ್ತಿ ಇರುವ ಶರಣರು ಮೊದಲೇ ತಮ್ಮ ಹೆಸರುಗಳನ್ನು ತಿಳಿಸಬೇಕು. ವಾಹನಗಳನ್ನು ಗೊತ್ತುಮಾಡಲು ಅನುಕೂಲವಾಗುತ್ತದೆ.

ಶರಣ.ಮಹಾಲಿಂಗಪ್ಪ, ಅಧ್ಯಕ್ಷರು -9902192055,
ಹೆಚ್.ಎಸ್.ಬಸವರಾಜು - 9449362934, ವೈ.ಬಸವರಾಜು -9448971997

ಶರಣ ಬಂಧುಗಳಲ್ಲಿ ವಿನಂತಿ

ಕಲ್ಯಾಣ ಕಿರಣ ತಲುಪದಿದ್ದಲ್ಲಿ ನಿಮ್ಮ ಚಂದಾ ಸಂಖ್ಯೆ, ಪೂರ್ಣ ವಿಳಾಸ, ಪಿನ್‌ಕೋಡ್, ದೂರವಾಣಿ ಸಂಖ್ಯೆ ಯಾವ ತಿಂಗಳು ತಲುಪಿಲ್ಲ ಸವಿವರವಾಗಿ ಈ ದೂರವಾಣಿ ಸಂಖ್ಯೆಗಳಿಗೆ 7760627640, 8892912123 ಎಸ್.ಎಂ.ಎಸ್. ಮುಖಾಂತರ ಕಳುಹಿಸಿರಿ.

Kalyana Kirana -Reg No.19988/70. Monthly Magazine Edited And Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10. Ph: 080-23131476, 22923736



ಕಾಯಕವೇ ಕೈಲಾಸವೆಂಬ ಮಹಾಮಂತ್ರವನ್ನು ಸಾರಿದ ಬಸವ ಕಲ್ಯಾಣ ಸುಕ್ಷೇತ್ರದಲ್ಲಿ ಹತ್ತನೆಯ

ಕಲ್ಯಾಣ ಪರ್ವ

2011ರ ಅಕ್ಟೋಬರ್ 09, 10 ಮತ್ತು 11 ರಂದು

ಶರಣ ಬಂಧುಗಳಿಗೆ ಶರಣು ಶರಣಾರ್ಥಿ.

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವಾಯತರೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತೆ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು 1988ರಿಂದ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ನಡೆಸಿಕೊಂಡು ಬರಲಾಗುತ್ತಿದ್ದು 24ನೆಯ ಶರಣ ಮೇಳವು ಇದೇ 2011ರ ಜನವರಿಯಲ್ಲಿ ಯಶಸ್ವಿಯಾಗಿ ಜರುಗಿದೆ. ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಲಿಂಗದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪು ರೇಷೆ ಹಾಕಿದುದು ಕೂಡಲ ಸಂಗಮದಲ್ಲಿ. ಆ ನೀಲನಕ್ಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ.

"ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಸಂಗನ ಬಸವಣ್ಣ
ಬಂದು ಕಲ್ಯಾಣದಲ್ಲಿ ಮಹಾಮನೆಯ ಕಟ್ಟಿದಡೆ
ಮರ್ತ್ಯಲೋಕವೆಲ್ಲವೂ ಭಕ್ತಿಸಾಮ್ರಾಜ್ಯವಾಯಿತು"

ಎಂದು ಬಸವಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, "ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ" ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮನಾಮ ಸಂವತ್ಸರ (ಕ್ರಿ.ಶ.1160) ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ.1196)ದ ವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು 2002ನೆಯ ಇಸವಿಯ ಮೇ 1, 2 ಮತ್ತು 3ರಂದು ಮೊಟ್ಟ ಮೊದಲನೆಯ ಕಲ್ಯಾಣಪರ್ವ ಸಮಾಗಮವನ್ನು ಸಂಯೋಜಿಸಲಾಗಿತ್ತು. ಜನವರಿ 14 ಇಷ್ಟಲಿಂಗದ ಪರಿಕಲ್ಪನೆ ರೂಪು ತಳೆದು ಲಿಂಗಾಯತ ಧರ್ಮವು ಸಂಸ್ಥಾಪನೆಗೊಂಡ ದಿನವಾದರೆ ಮೇ 1 ಕಾಯಕದ ದಿನ ; ಕಾಯಕ ಜೀವಿಗಳಿಗೆ ಗೌರವ ಸೂಚಿಸುವ ದಿನ. "ಕಾಯಕವೇ

ಕೈಲಾಸ'' ಎಂಬ ದುಡಿಮೆಯ ಸೂತ್ರವನ್ನು ಸಾರಿ ದುಡಿಮೆಗೆ ದಿವ್ಯತ್ವ ನೀಡಿ, ಸಮಾಜವಾದದ ಆಧಾರ ಸ್ತಂಭವಾದ ಕಾಯಕಕ್ಕೆ ಪಟ್ಟ ಕಟ್ಟಿದ ಕ್ರಾಂತಿಪುರುಷ ಬಸವಣ್ಣನವರು ಕಾಯಕ-ದಾಸೋಹ-ಪ್ರಸಾದ ಎಂಬ ತ್ರಿತತ್ತ್ವವನ್ನು ಸಾರಿ ಜಾತಿವರ್ಣವರ್ಗರಹಿತ ಧರ್ಮ ಸಹಿತ ಕಲ್ಯಾಣ ರಾಜ್ಯವನ್ನು ಕಟ್ಟಿದುದು ಬಸವ ಕಲ್ಯಾಣದ ಪುಣ್ಯಭೂಮಿಯಲ್ಲೇ. ಕಾಯಕ ದಿನ ಮೇ ಒಂದನ್ನು ಮುಖ್ಯವಾಗಿರಿಸಿಕೊಂಡು ಪ್ರತಿ ವರ್ಷ ''ಕಲ್ಯಾಣ ಪರ್ವ''ವನ್ನು ನಡೆಸಲಾಗುತ್ತಿತ್ತು. ಆರನೆಯ ಕಲ್ಯಾಣ ಪರ್ವವನ್ನು 2007 ನೆಯ ಇಸವಿಯ ಮೇ1,2 ಮತ್ತು 3ರಂದು ನಡೆಸಲಾಯಿತು. ಗಾಳಿ ಮತ್ತು ಮಳೆಯ ಕಾರಣ ಸಮಯವನ್ನು ಬದಲಾಯಿಸಿ 10 ನೆಯ ಕಲ್ಯಾಣ ಪರ್ವವನ್ನು 2011 ರ ಅಕ್ಟೋಬರ್ 09, 10 ಮತ್ತು 11 ರಂದು ಏರ್ಪಡಿಸಲಾಗುತ್ತಿದೆ.

ಕಲ್ಯಾಣ (ಗಣ) ಪರ್ವಕ್ಕೆ ಧನ ಸಹಾಯ

ಕಲ್ಯಾಣ ಎಂಬುದು ಒಂದು ಸ್ಥಳದ ಹೆಸರು ಮತ್ತು ವಿಶ್ವಗುರು ಬಸವಣ್ಣನವರ ಧ್ಯೇಯವೇ ಎಲ್ಲ ಮಾನವರ ಲೇಸು - ಕಲ್ಯಾಣ. ಆದರ್ಶ ಕಲ್ಯಾಣ ರಾಜ್ಯ (Welfare state) ನಿರ್ಮಾಣವೇ ಅವರ ಹೋರಾಟದ ಗುರಿಯಾಗಿತ್ತು. ಗಣ ಎಂದರೆ ಸಮೂಹ, ಪರ್ವ ಎಂದರೆ ಹಬ್ಬ, ಶರಣ ಗಣವು ಶರಣ ಭೂಮಿ ಬಸವ ಕಲ್ಯಾಣದಲ್ಲಿ ನೆರೆದು ಆದಿ ಶರಣರ ಜೀವನ-ಸಾಧನೆ-ಸಂದೇಶಗಳನ್ನು ಕೊಂಡಾಡುವ ಹಬ್ಬ ಈ ಕಲ್ಯಾಣ ಪರ್ವ. ಅಂದು ಧರ್ಮಪಿತ ಬಸವಣ್ಣನವರು ಗಣಪರ್ವಗಳನ್ನು ಕಲ್ಯಾಣದಲ್ಲಿ ನಡೆಸುತ್ತಿದ್ದು, ಭಕ್ತರು ಅಂಗ, ವಂಗ, ಕಳಿಂಗ, ಗುರ್ಜರ, ಸಿಂಹಳ ಮುಂತಾದ ಭಾಗಗಳಿಂದೆಲ್ಲ ಸಮಾವೇಶವಾಗುತ್ತಿದ್ದುದಾಗಿ ಹರಿಹರ, ಸಿಂಗಿರಾಜ ಮುಂತಾದವರು ತಮ್ಮ ಕಾವ್ಯಗಳಲ್ಲಿ ಬಣ್ಣಿಸುತ್ತಾರೆ. ''ಪಾಷಂಡಿ ಭೂಮಿಯೊಳು ಶಿವಭಕ್ತಿಯನಾರಂಭಿಸಿ ಸಾಮರ್ಥ್ಯಮಂ ಬಿತ್ತಿ ಪ್ರತ್ಯಕ್ಷಂಗಳಂ ಬೆಳೆದು, ಗಣಪರ್ವಂಗಳ ಸುಫಲಂ ಮಾಡಲೆಂದು ಬಂದ ಕಾರಣಿಕ ಬಸವ ನಿನ್ನ ದೆಸೆಯಿಂದ ಎಮ್ಮ ಭಕ್ತಿ ಬಣ್ಣವೇರಿತು'' ಎಂದು ಹರಿಹರನು ಉದ್ಗರಿಸುತ್ತಾನೆ. ಅಂಥ ಗಣಪರ್ವವನ್ನು ಇಂದು ನೀವು-ನಾವು ಮಾಡಿ ತೋರಿಸಬೇಕಾಗಿದೆ. ಅಕ್ಟೋಬರ್ 08ರ ರಾತ್ರಿಯಿಂದ ಅಕ್ಟೋಬರ್ 12 ರ ಬೆಳಗಿನವರೆಗೆ ಕಲ್ಯಾಣ ಪರ್ವದಲ್ಲಿ ಸಮಾವೇಶವಾಗುವ ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆ ಮಾಡಬೇಕಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಅವಶ್ಯಕತೆ ಇರುತ್ತದೆ. ದಾನಿಗಳು ಮುಂದೆ ಸೂಚಿಸಿದಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು	: 5000 ರೂ. ಮತ್ತು ಮೇಲೆ ಕೊಟ್ಟವರು
2. ಪೋಷಕರು	: 2000 ರೂ. ಮತ್ತು ಮೇಲೆ ಕೊಟ್ಟವರು
3. ದಾನಿಗಳು	: 1000 ರೂ. ಮತ್ತು ಮೇಲೆ ಕೊಟ್ಟವರು
4. ಹಿತೈಷಿಗಳು	: 500 ರೂ
5. ಸ್ವಾಗತ ಸಮಿತಿ ಸದಸ್ಯತ್ವ	: 300 ರೂ

6. ಪ್ರತಿನಿಧಿ ಶುಲ್ಕ	: 150 ರೂ.

ಒಂದೊಂದು ಹೊತ್ತಿನ ದಾಸೋಹ ವೆಚ್ಚ ಸಹ ಕೊಡಬಹುದು.

ಅನ್ನ ದಾಸೋಹಕ್ಕಾಗಿ ಭಕ್ತಿಪೂರ್ವಕ ಕಾಣಿಕೆಗಳನ್ನು ಶಕ್ತ್ಯಾನುಸಾರ ಕೊಡಬಹುದು.

ವಿ.ಸೂ. : ವಾರ್ಷಿಕ ಸಮಾವೇಶವಾದ ಕಲ್ಯಾಣಪರ್ವಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F.D) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಕಲ್ಯಾಣಪರ್ವದ ದಾಸೋಹಕ್ಕೆ ವಿನಿಯೋಗಿಸಲಾಗುವುದು. ರಸೀತಿ ಪುಸ್ತಕ, ಕರಪತ್ರಗಳನ್ನು ಪಡೆದು ದೇಣಿಗೆ ಸಂಗ್ರಹಿಸುವವರಿಗೂ ಅವಕಾಶವಿದೆ.

ಶರಣ ಭೂಮಿ ಬಸವ ಕಲ್ಯಾಣದಲ್ಲಿ ವಿವಿಧ ಯೋಜನೆಗಳು

ಬಸವ ಧರ್ಮ ಪೀಠ (ರಿ.) ಟ್ರಸ್ಟ್ ವತಿಯಿಂದ ಬಸವ ಕಲ್ಯಾಣದಲ್ಲಿ ಶರಣ ಸಂಸ್ಕೃತಿಯ ಪುನರುತ್ಥಾನ ಮಾಡಬೇಕೆಂದು ಸಂಕಲ್ಪಿಸಿ ದಿ.21-12-2001 ರಂದು ರಾಷ್ಟ್ರೀಯ ಹೆದ್ದಾರಿ 9 ರಿಂದ ಬಸವ ಕಲ್ಯಾಣಕ್ಕೆ ಹೋಗುವ ಮುಖ್ಯರಸ್ತೆಯ ಬದಿಗೆ 3 ಎಕರೆ ಜಮೀನನ್ನು ಖರೀದಿಸಲಾಯಿತು. ಪುನಃ ಹದಿನೇಳೂವರೆ ಎಕರೆ ಖರೀದಿಸಿ ಬಸವ ಮಹಾಮನೆ ಎಂಬ ಹೆಸರಿನಲ್ಲಿ ಮಠವನ್ನು ಸ್ಥಾಪಿಸಿರುವುದೇ ಅಲ್ಲದೆ ನಿತ್ಯ ದಾಸೋಹ, ಹುಣ್ಣಿಮೆ ಕಾರ್ಯಕ್ರಮ ನಡೆಸಿಕೊಂಡು ಬರಲಾಗುತ್ತಿದೆ. 1 2ನೆಯ ಶತಮಾನದ ಧಾರ್ಮಿಕ ವೈಭವ 21ನೆಯ ಈ ಶತಮಾನದಲ್ಲಿ ನಡೆಯುವಂತೆ ಕಾರ್ಯೋನ್ಮುಖವಾಗಬೇಕಾಗಿದೆ. ಅದು ಶರಣರ ಸಂಕಲ್ಪ ಕೂಡ. ಹೇಗೆಂದರೆ ಬಸವಣ್ಣನವರು ಕಲ್ಯಾಣವನ್ನು ಗಡಿಪಾರಾಗಿ ಬಿಟ್ಟು ಹೋದ 770 ವರ್ಷಗಳ ನಂತರ ನಾವು ಬರುತ್ತೇವೆ ಎಂದು ಭವಿಷ್ಯವಾಣಿ ನುಡಿದಿದ್ದಾರೆ. ಶರಣರು ಮುಕ್ತಾತ್ಮರಾದ ಕಾರಣ ಅವರು ಶರೀರಧಾರಿಗಳಾಗಿ ಬರುವುದಿಲ್ಲ; ಅವರ ಸಂದೇಶಗಳು ಪುನಃ ಪ್ರಚಾರಗೊಳ್ಳುತ್ತವೆ. ಅವರ ಸಂಕಲ್ಪಗಳು ಕಲ್ಯಾಣ ಕ್ರಾಂತಿಯಿಂದಾಗಿ ಅಪೂರ್ಣವಾಗಿ ಉಳಿದಿದ್ದವು, ಈಗ ಪೂರ್ಣಗೊಳ್ಳುವ ಕಾಲ ಬರುತ್ತದೆ ಎಂಬುದೇ ಅವರ ಸಂಕಲ್ಪದ ಮರ್ಮ. ಜಗ ಬದುಕಲಿ, ಜನ ಬದುಕಲಿ ಎಂದು ಆದಿ ಶರಣರು ವಚನಗಳನ್ನು ರಚಿಸಿದುದು ಮಾತ್ರವಲ್ಲ ವಚನ ಸಾಹಿತ್ಯವನ್ನು ನಾಶ ಮಾಡಬೇಕೆಂದು ಜಾತಿವಾದಿಗಳು ಪಣ ತೊಟ್ಟಾಗ, ತಮ್ಮ ಪ್ರಾಣವನ್ನು ಪಣಕ್ಕಿಟ್ಟು, ಹೋರಾಡಿ ವಚನ ವಾಙ್ಮಯವನ್ನು ರಕ್ಷಿಸಿದರು. ಆದಿ ಶರಣರ ಆ ಬಲಿದಾನದ ಋಣವನ್ನು ತೀರಿಸಬೇಕಾದ್ದು ಪ್ರತಿಯೊಬ್ಬ ಅನುಯಾಯಿಯ ಅಭಿಮಾನದ ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿ ಬಸವ ಧರ್ಮ ಪೀಠ ಟ್ರಸ್ಟಿನ ಬಸವ ಕಲ್ಯಾಣ ಶಾಖೆಯಲ್ಲಿ ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ. ಕಾಣಿಕೆ ನೀಡುವವರಿಗೆ ಅವಕಾಶವಿದೆ.

ಕಲ್ಯಾಣ ಪರ್ವ ಉತ್ಸವ ಸಮಿತಿ, ಬಸವ ಧರ್ಮ ಪೀಠ, ಬಸವ ಮಹಾಮನೆ, ಬಸವ ಕಲ್ಯಾಣ -585327, ಜಿಲ್ಲೆ-ಬೀದರ್

☎ :08481 -251921/252856, 9663385657, 9480497346

- ಮಾತಾಜಿ

ಬಸವ ವಚನಾಮೃತ

622.ಕಪಟಿಗಳಿಗೆ ದಾನ ಸಲ್ಲದು

ದ್ವಿಜರಿಗೆ ಕೊಟ್ಟು ಹಲಬರು ಕೆಟ್ಟರು;
ಉದ್ಧರಿಸುವನೊಬ್ಬ, ಶಿವಶರಣ ಸಾಲದೆ ?
ನಾರಾಯಣ ವೃದ್ಧಬ್ರಾಹ್ಮಣನಾಗಿ ಬಂದು
ಬಲಿಯ ಭೂಮಿಯ ದಾನವ ಬೇಡಿದ
ಕೊಟ್ಟ ಬಲಿ ಬಂಧನಕ್ಕೊಳಗಾದ!
ಈಶ ಭಕ್ತನಾಗಿ ಬಂದು ದಾಸನ ವಸ್ತ್ರಬೇಡಿದ;
ಕೊಟ್ಟ ದಾಸ ತವ ನಿಧಿಯ ಪಡೆದ !
ಕಪಟದಿಂದ ನಾರಾಯಣ ಹಾರುವನಾಗಿ ಬಂದು
ಕರ್ಣನ ಕವಚವ ಬೇಡಿದ
ಕೊಟ್ಟ ಕರ್ಣ ಕಳದಲ್ಲಿ ಮಡಿದ !
ಕಾಮಾರಿ ಜಂಗಮವಾಗಿ ಬಂದು ಸಿರಿಯಾಳನ ಮಗನ ಬೇಡಿದ;
ಕೊಟ್ಟ ಸಿರಿಯಾಳಸೆಟ್ಟಿಯ ಕಂಚಿಯ ಪುರವ ಕೈಲಾಸಕ್ಕೊಯ್ದ.
ನಾರಾಯಣ ಹಾರುವನಾಗಿ ಬಂದು ನಾಗಾರ್ಜುನನ ಶಿರವ ಬೇಡಿದ;
ಕೊಟ್ಟ ನಾಗಾರ್ಜುನನ ಶಿರಹೋಯಿತ್ತು!
ಶಿವನು ಜಂಗಮವಾಗಿ ಬಂದು ಸಿಂಧುಬಲ್ಲಾಳನ ವಧುವ ಬೇಡಿದ;
ಕೊಟ್ಟ ಸಿಂಧುಬಲ್ಲಾಳ ಸ್ವಯಲಿಂಗವಾದ !
ಇದು ಕಾರಣ ಇಲ್ಲಿಯೂ ಲೇಸು, ಅಲ್ಲಿಯೂ ಲೇಸು;
ಕೊಡಿರೇ, ನಮ್ಮ ಲಿಂಗದೇವನ ಶರಣರಿಗೆ. -ಬ.ವ.ದೀ. 620

ಬ್ರಾಹ್ಮಣರಿಗೆ ಇಲ್ಲವೆನ್ನಬಾರದು, ಬ್ರಾಹ್ಮಣನಿಗೆ ದಾನ ಕೊಡಬೇಕು ಎಂಬ ನಂಬಿಕೆಗೆ ಕಟ್ಟುಬಿದ್ದು ಇತಿಹಾಸದಲ್ಲಿ ಅನೇಕರು ವಂಚನೆಗೊಳಗಾಗಿದ್ದಾರೆ. ಆದರೆ ಶಿವಭಕ್ತರು ಹಾಗಲ್ಲ. ಅವರು ದಾನವನ್ನು ಪಡೆದು ಅನುಗ್ರಹಿಸುವರೇ ವಿನಾ ವಂಚನೆ ಮಾಡರು.

ಬಲಿ ಚಕ್ರವರ್ತಿ ಒಬ್ಬ ಜನಪ್ರಿಯ ರಾಜ, ಪ್ರೀತಿಯಿಂದ ಪ್ರಜೆಗಳ ಪಾಲನೆ ಮಾಡುತ್ತಿದ್ದ. ಅವನ ರಾಜ್ಯವನ್ನು ವಶಪಡಿಸಿಕೊಳ್ಳುವ ದುರುದ್ದೇಶದಿಂದ ನಾರಾಯಣನು ಬ್ರಾಹ್ಮಣವಟುವಾಗಿ ಬಂದು ಭೂಮಿಯ ದಾನ ಪಡೆದು ಬಲಿಯನ್ನು ಪಾತಾಳಕ್ಕೆ ದೂಡಿ ಬಂಧನದಲ್ಲಿ ಇರಿಸಿದ. ಶಿವನು ಭಕ್ತರ ವೇಷದಲ್ಲಿ ಬಂದು ದೇವರ ದಾಸಿಮಯ್ಯನ ಬಳಿ ಇದ್ದ ಬೆಲೆ ಬಾಳುವ ರೇಷ್ಮೆ ವಸ್ತ್ರವನ್ನು ಪಡೆದ. ಪ್ರತಿಫಲವಾಗಿ ದಾಸಿಮಯ್ಯನು ಅಕ್ಷಯ ನಿಧಿಯನ್ನು ಪಡೆದನು. ಕಪಟತನದಿಂದ ಕೃಷ್ಣನು ಬ್ರಾಹ್ಮಣ ವೇಷದಲ್ಲಿ ಬಂದು ಕರ್ಣನ ಕವಚವನ್ನು ಬೇಡಿದ. ಬ್ರಾಹ್ಮಣನಿಗೆ ಇಲ್ಲವೆನ್ನಬಾರದು ಎಂಬ ನಂಬಿಕೆಯಿಂದ ಕರ್ಣ ಕವಚವನ್ನು ಕೊಟ್ಟು ದುರ್ಬಲನಾದ, ಯುದ್ಧದಲ್ಲಿ ಮಡಿದ. ಶಿವನು ಜಂಗಮ ರೂಪದಲ್ಲಿ ಬಂದು ಶಿರಿಯಾಳನ ಮಗನನ್ನು ಬೇಡಿದ. ಕೊಟ್ಟ

ಸಿರಿಯಾಳ ಶೆಟ್ಟಿಯನ್ನು ಮತ್ತು ಇಡೀ ಕಂಚೀಪುರವನ್ನು ಕೈಲಾಸಕ್ಕೆ ಒಯ್ದ.

ನಾರಾಯಣ ಬ್ರಾಹ್ಮಣ ವೇಷದಲ್ಲಿ ಬಂದು ನಾಗಾರ್ಜುನನ ಶಿರವ ಬೇಡಿದ ಕೊಟ್ಟ ನಾಗಾರ್ಜುನನ ಶಿರ ಹೋಯಿತ್ತು. ಶಿವನು ಜಂಗಮವಾಗಿ ಬಂದು ಸಿಂಧುಬಲ್ಲಾಳನ ಹೆಂಡತಿಯನ್ನು ಬೇಡಿದ. ಕೊಟ್ಟ ಸಿಂಧುಬಲ್ಲಾಳ ಸ್ವಯಲಿಂಗವಾದ. ಆದ್ದರಿಂದ ಶಿವಭಕ್ತರಿಗೆ, ಶಿವಶರಣರಿಗೆ ಕೊಟ್ಟರೆ ಇಲ್ಲಿಯೂ ಲೇಸು, ಅಲ್ಲಿಯೂ ಲೇಸು. ಸತ್ಪಾತ್ರಕ್ಕೆ ದಾನ ಮಾಡಿರಿ. ಮೋಸವಾಗುತ್ತಿದೆ ಎಂಬುದು ತಿಳಿದಾಗ ದಾನ ಮಾಡುವುದು ಸರಿಯಲ್ಲ, ದಡ್ಡತನ ಮತ್ತು ಅಪಾಯಕಾರಿ !!

623. ದೇವಂಗೆ ಶರಣಾಗು

ಮಾಯದ ಸಂಸಾರವ ನಚ್ಚಿ
ಬರುದೊರೆವೊಗಬೇಡ;
ಕರ್ತೃ ಲಿಂಗದೇವಂಗೆ ಶರಣೆನ್ನಿರಯ್ಯಾ!

-ಬ.ವ.ದೀ. 621

ಮಾಯಾತ್ಮಕವಾದ ಸಂಸಾರವನ್ನು ನಂಬಿ, ವ್ಯರ್ಥವಾದುದಕ್ಕೆ ಹೋರಾಡುತ್ತ ಆಯುಷ್ಯವನ್ನು, ಶಕ್ತಿಯನ್ನು, ಸಮಯವನ್ನು ಹಾಳು ಮಾಡಿಕೊಳ್ಳಬೇಡ. ಸ್ಥಿರವೂ, ಶಾಶ್ವತವೂ ಆದ ಸೃಷ್ಟಿಕರ್ತ ಲಿಂಗದೇವಂಗೆ ಶರಣೆನ್ನಿರಿ, ಬದುಕನ್ನು ಸಾರ್ಥಕಗೊಳಿಸಿರಿ.

624. ಚಾಳುಕ್ಯರಾಯನ ಆಳ್ವಿಕೆ ತೆಗೆಯಿತ್ತು

ಅರಸು ವಿಚಾರ ಸಿರಿಯು ಶೃಂಗಾರ ಸ್ಥಿರವಲ್ಲ, ಮಾನವಾ;
ಕೆಟ್ಟಿತ್ತು ಕಲ್ಯಾಣ, ಹಾಳಾಯಿತ್ತು, ನೋಡಾ!
ಒಬ್ಬ ಜಂಗಮದಭಿಮಾನದಿಂದ
ಜಗದೇವ ಮೊಲ್ಲೆ ಬೊಮ್ಮಣ್ಣಗಳ ಕೈಯಲ್ಲಿ
ಮಡಿದಿಹನು ಬಿಜ್ಜಳನು.
ಚಾಳುಕ್ಯರಾಯನ ಆಳಿಕೆ ತೆಗೆಯಿತ್ತು!
ಸಂದಿತ್ತು, ಲಿಂಗದೇವಾ, ನಿಮ್ಮ ಕವಳಿಗೆಗೆ !

-ಬ.ವ.ದೀ. 623

ಈ ವಚನ ಬಹಳ ಮಹತ್ವಪೂರ್ಣವಾದುದು. ಇದರಲ್ಲಿ ಐತಿಹಾಸಿಕ ಅಂಶಗಳು ಅಡಕವಾಗಿವೆ. ಅರಸರ ವಿಚಾರ, ಶ್ರೀಮಂತಿಕೆ ಮತ್ತು ಚೆಲುವಿಕೆ ಶಾಶ್ವತವಲ್ಲ. ಸಾಮಾನ್ಯವಾಗಿ ಅರಸರು ಮೈಯೆಲ್ಲ ಬಂಗಾರ ಅರ್ಥಾತ್ ಒಳ್ಳೆಯವರಾಗಿದ್ದರೂ ಅವರ ಕಿವಿ ಮಾತ್ರ ಹಿತ್ತಾಳೆಯದಾಗಿರುವ ಸಂಭವವಿರುತ್ತದೆ, ಅವರು ಇತರರ ಮಾತುಗಳಿಗೆ, ಚಾಡಿಗಳಿಗೆ ಬೇಗನೆ ಕಿವಿ ಕೊಟ್ಟು ಮನಸ್ಸನ್ನು ಕೆಡಿಸಿಕೊಳ್ಳುವರು. (ಹೀಗಾಗಿ ಬಿಜ್ಜಳನು ಗುರು ಬಸವಣ್ಣನವರು ತಿಳಿಸಿ ಹೇಳಿದಾಗ ಒಪ್ಪಿಕೊಂಡು ಸಮಾಧಾನ ತಾಳಿದರೂ ಚಾಡಿಕೋರರ ಮಾತು ಕೇಳಿ ಹೊಯ್ದಾಡುತ್ತಿದ್ದ. ಹೀಗಾಗಿ ಅವನ ವಿಚಾರವು ಬದಲಾಗುತ್ತಿತ್ತು.)

****

<u>ಕೆಟ್ಟಿತ್ತು ಕಲ್ಯಾಣ ಹಾಳಾಯಿತ್ತು ನೋಡಾ :</u> ಅರಸನ ಈ ಚಂಚಲ ಪ್ರವೃತ್ತಿಯಿಂದ ಕೈಲಾಸದಂತಿದ್ದ ಕಲ್ಯಾಣ ಹಾಳಾಗಿ ಕಟುಕರ ಕೇರಿಯಾಗಲಿದೆ.

<u>ಒಬ್ಬ ಜಂಗಮದ ಅಭಿಮಾನದಿಂದ :</u> ಈ ವಾಕ್ಯಕ್ಕೆ ಎರಡು ರೀತಿಯ ಅರ್ಥವಿದೆ. ಅಭಿಮಾನದಿಂದ ಎಂದರೆ ನೋವಿನಿಂದ ಎಂದು ಒಂದು ಅರ್ಥ ಉಂಟು. ಹರಳಯ್ಯನವರಂತಹ ಪವಿತ್ರಾತ್ಮರನ್ನು ಎಳೆಹೂಟೆ ಶಿಕ್ಷೆಯಿಂದ ನೋಯಿಸಿದ್ದರಿಂದ ಕಲ್ಯಾಣಕ್ಕೆ ಈ ವಿಪತ್ತು ಬಂದಿತು ಎಂದು ಅರ್ಥಮಾಡಬಹುದು.

'ಒಬ್ಬ ಜಂಗಮದ ಅಭಿಮಾನದಿಂದ' ಎಂದರೆ ವೀರ ಶರಣ ಮಡಿವಾಳ ಮಾಚಿದೇವರ ಸ್ವಾಭಿಮಾನ, ಛಲದಿಂದಾಗಿ ಜಗದೇವ ಮಲ್ಲೆ ಬೊಮ್ಮಣ್ಣಗಳ ಕೈಯಲ್ಲಿ ಮಡಿದಿಹನು ಬಿಜ್ಜಳ. ಗುರು ಬಸವಣ್ಣನವರು ಶಾಂತಮೂರ್ತಿಯಾಗಿ ಗಡಿಪಾರು ಶಿಕ್ಷೆ ಸ್ವೀಕರಿಸಿ ಕಲ್ಯಾಣದಿಂದ ಹೊರಟರು. ಆದರೆ ನಂತರ ಹರಳಯ್ಯ -ಮಧುವರಸ-ಶೀಲವಂತರ ಬಂಧನವಾಗಿ ಅವರಿಗೆ ಎಳೆಹೂಟೆ ಶಿಕ್ಷೆಯಾಯಿತು. ಇದರಿಂದ ಮಾಚಿದೇವರು ತಪ್ತರಾದರು. ತಮ್ಮ ಶಾಂತಿಗೆ ಅರ್ಥವೇ ಇಲ್ಲ, ಇನ್ನು ಬಿಜ್ಜಳನ ದುರುಳತನವನ್ನು ಸಹಿಸಿಕೊಳ್ಳಲು ಸಾಧ್ಯವಾಗದು ಎಂದು ಚಾಲುಕ್ಯ ಸಾಮಂತರಾಗಿದ್ದ ಜಗದೇವ, ಮಲ್ಲಣ್ಣ, ಬೊಮ್ಮಣ್ಣರನ್ನು ಪ್ರಚೋದಿಸಿದರು. ಚಾಲುಕ್ಯ ಸಿಂಹಾಸನ ವನ್ನು ಆಕ್ರಮಿಸಿಕೊಂಡಿದ್ದ ಕಲಚೂರಿ ಬಿಜ್ಜಳನ ಅತಿಕ್ರಮಣದಿಂದ ತಪ್ತರಾದ ಅವರು ದೀವಟಿಗೆ ಯವರ ವೇಷದಲ್ಲಿ ಅರಮನೆಯನ್ನು ಹೊಕ್ಕು ಬಿಜ್ಜಳನನ್ನು ತಿವಿದುಕೊಂದರು. ಇದರಿಂದ ಚಾಳುಕ್ಯ ರಾಯನ ಆಳ್ವಿಕೆ ಮುಗಿಯಿತು! ಚಾಲುಕ್ಯರಾಜ್ಯ ದೇವರ ಕವಳಿಗೆಗೆ (ಕಾಲನ ಬುಟ್ಟಿಯೊಳಕ್ಕೆ), ಜೋಳಿಗೆಗೆ ಸೇರಿತು.

ಬಿಜ್ಜಳನು ಚಾಳುಕ್ಯ ಸಿಂಹಾಸನವನ್ನು ಅತಿಕ್ರಮಿಸಿ, ಚಾಲುಕ್ಯ ತೈಲಪನನ್ನು ಮೂಲೆಗೆ ಸರಿಸಿದ್ದು ಗುರು ಬಸವಣ್ಣನವರಿಗೂ ಇಷ್ಟವಾಗಿರಲಿಕ್ಕಿಲ್ಲ. ಬಿಜ್ಜಳನ ಆಳಿಕೆ ತೆಗೆಯಿತ್ತು ಎನ್ನದೆ ಚಾಳುಕ್ಯರಾಯನ ಆಳಿಕೆ ತೆಗೆಯಿತ್ತು ಎನ್ನುವರು.

ಕೆಲವರು ಕುಚೋದ್ಯತನದಿಂದ ಬಿಜ್ಜಳನನ್ನು ಶರಣರು ವಧಿಸಿದರು ಎಂದು ಆರೋಪಿಸುವರು. ಈ ವಚನದಿಂದ ತಿಳಿಯುವುದೇನೆಂದರೆ ಬಿಜ್ಜಳನ ರಾಜಕೀಯ ಶತ್ರುಗಳಾದ ಜಗದೇವ, ಮಲ್ಲಣ್ಣ, ಬೊಮ್ಮಣ್ಣ ಬಿಜ್ಜಳನನ್ನು ಕೊಂದವರು ಎಂಬುದು.

625. ಭಕ್ತರಲ್ಲದವರ ಒಡನಾಟ ಬೇಡ

ಬೇವಿನ ಬೀಜವ ಬಿತ್ತಿ; ಬೆಲ್ಲದ ಕಟ್ಟೆಯ ಕಟ್ಟಿ;
ಆಕಳ ಹಾಲನೆರೆದು, ಜೇನುತುಪ್ಪವ ಹೊಯ್ದಡೆ,
ಸಿಹಿಯಾಗಬಲ್ಲುದೆ, ಕಹಿಯಹುದಲ್ಲದೆ ?
ಭಕ್ತರಲ್ಲದವರ ಕೂಡ ನುಡಿಯಲಾಗದು.
ಲಿಂಗದೇವಾ.

-ಬ.ವ.ದೀ. 624

ಕಹಿಫಲಗಳನ್ನು ಕೊಡುವ ಬೇವಿನ ಬೀಜವನ್ನು ಬಿತ್ತಿ ನಂತರ ಬೆಲ್ಲದ ಕಟ್ಟೆಯ ಕಟ್ಟಿ

****

ಆಕಳ ಹಾಲನೆರೆದು, ಜೇನು ತುಪ್ಪವನ್ನು ಹಾಕಿ ಬೆಳೆಸಿದರೆ ಬರುವ ಫಲವು ಕಹಿಯಾಗಿ ಇರುವುದಲ್ಲದೆ ಸಿಹಿಯಾಗಿರಲು ಸಾಧ್ಯವೆ ?

ಈ ಸೈದ್ಧಾಂತಿಕಸೂತ್ರವನ್ನು ಬೇರೆ ಬೇರೆ ರೀತಿ ಅನ್ವಯಿಸಬಹುದು. ಹೇಗೆಂದರೆ, ವರ್ಣಾಶ್ರಮ ವಿಭಜನೆಯ ಬೀಜವನ್ನು ಬಿತ್ತಿ ನಂತರ ಅದನ್ನು ಗುಣದ ಆಧಾರದ ಮೇಲೆ ಮಾಡಲಾಗಿದೆ, ವೃತ್ತಿಗಳ ಆಧಾರದ ಮೇಲೆ ಮಾಡಲಾಗಿದೆ ಎಂದು ಸಮರ್ಥಿಸಿಕೊಳ್ಳ ಹೋದರೆ ಆದೀತೆ? ಗುಣದ ಆಧಾರದ ಮೇಲೆ ಆದರೆ ವರ್ಣಗಳು ಸತ್ವ, ರಜ ಮತ್ತು ತಮ ಎಂಬ ಮೂರು ಗುಣಗಳ ಮೇಲೆ ಆಗಬೇಕಿತ್ತು. ಬ್ರಾಹ್ಮಣರೆಲ್ಲ ಸಾತ್ವಿಕರು, ಕ್ಷತ್ರಿಯರು ರಜೋಗುಣದವರು, ವೈಶ್ಯರು ತಮೋ ಗುಣದವರು ಎಂದು ವರ್ಗೀಕರಣ ಮಾಡಲು ಸಾಧ್ಯವೆ ? ವೃತ್ತಿಯ ಮೇಲೆ ವರ್ಗೀಕರಣ ಮಾಡಲು ಸಾಧ್ಯವೆ? ಇನ್ನು ವೃತ್ತಿಯ ಮೇಲೆ ವರ್ಗೀಕರಿಸುವುದಾದರೆ ಹುಟ್ಟಿನ ಮೇಲೆ ವಿಭಜನೆ ಮಾಡಬಾರದು. ವರ್ಣ ವ್ಯವಸ್ಥೆಯ ವಿಷಫಲವೇ ಅಸ್ಪೃಶ್ಯತೆ. ಬಿತ್ತುವ ಬೀಜಒಳ್ಳೆಯದಿರಬೇಕು ಎಂಬಂತೆ ಮೂಲ ಸಿದ್ಧಾಂತವು ಚೆನ್ನಾಗಿರಬೇಕು.

<u>ಭಕ್ತರಲ್ಲದವರ ಕೂಡ ನುಡಿಯಲಾಗದು;</u> ಶರಣನಾದವನು ಉತ್ತಮ ವಿಚಾರದವ ರೊಡನೆ ಒಡನಾಡಬೇಕು. ಅನ್ಯ ವಿಚಾರದವರೊಡನೆ ಸತತವಾಗಿ ಒಡನಾಡುತ್ತಿದ್ದರೆ ಅವನಲ್ಲೇ ಬದಲಾವಣೆ ಆಗುವ ಸಂಭವವಿದೆ. ಸಸಿಗಳನ್ನು ಸುತ್ತಲೂ ಒಂದು ಜಾಳಿಗೆ ಇಟ್ಟು ಅಥವಾ ಒಣಗಿದ ಗರಿಕಟ್ಟಿ ರಕ್ಷಿಸುವಂತೆ ಸಮಾನ ಮನಸ್ಕರಾದ ಶರಣರ ಸಂಗದಲ್ಲಿ ತನ್ನ ಆದರ್ಶಗಳನ್ನು ರಕ್ಷಿಸಿ ಕೊಳ್ಳಬೇಕು.

626. ಕರ್ತನನರಿಯದವನು ಅಜ್ಞಾನಿ

ಕರ್ತನನರಿಯದವನು ವಿಪ್ರನಾದಡೇನು, ಚತುರ್ವೇದಿಯಾದಡೇನು?
ಭುಕ್ತಿ ಕಾರಣ ಲೋಕದ ಇಚ್ಛೆಗೆ ನುಡಿದು ನಡೆವರಯ್ಯಾ!
ಭವಿ ಮಾಡಿದ ಪಾಕವ ತಂದು,
ಲಿಂಗಕ್ಕರ್ಪಿಸುವ ಕಷ್ಟರ ಕಂಡು ನಾಚಿತ್ತೆನ್ನ ಮನವು
ಲಿಂಗದೇವನ ಶರಣರ ಒಕ್ಕುದ ಕೊಂಡು
ಅನ್ಯವನಾಚರಿಸಿದಡೆ ತಪ್ಪದು-
ಸೂಕರನ ಶುಚಿಭ್ರೂತತೆಯ ಪ್ರಾಣಿಯಂತೆ !

-ಬ.ವ.ದೀ. 625

ಗುರು ಬಸವಣ್ಣನವರು ಸೃಷ್ಟಿಕರ್ತನಿಗೆ ಪರಮೋನ್ನತ ಸ್ಥಾನವನ್ನು ಕೊಟ್ಟರು. ಭುವಿ ಬ್ರಹ್ಮಾಂಡಗಳ ಒಡೆಯನಾದ ದೇವನನ್ನು ಅರಿಯದವನು ಬ್ರಾಹ್ಮಣನಾದರೇನು, ನಾಲ್ಕು ವೇದ ಗಳಲ್ಲಿ ಬಲ್ಲಿದನಾದರೇನು? ಕೆಲವರು ಭುಕ್ತಿಗಾಗಿ (ಭಕ್ತಿಗಾಗಿ ಅಲ್ಲ) ಅಂದರೆ ಹೊಟ್ಟೆಯ ಪಾಡಿಗಾಗಿ ಜನರ ಇಚ್ಛೆಯಂತೆ ಮಾತನಾಡುವರು, ಅವರಂತೆ ನಡೆವರು. (ಅಂದು ಬ್ರಾಹ್ಮಣರು ತಮ್ಮ ಹೊಟ್ಟೆ ಪಾಡಿಗಾಗಿ ಜನರ ಇಷ್ಟದಂತೆ ಸಾಗಿದ್ದರೆ) ಇಂದು ಲಿಂಗಾಯತ ಮಠಾಧೀಶರು ಬಹುಪಾಲು ಜನ ಅದೇ ದಾರಿ ಹಿಡಿದಿದ್ದಾರೆ. ಲಿಂಗಾಯತ ಧರ್ಮಕ್ಕೆ ವಿರುದ್ಧವಾದ ಹೋಮ

-ಹವನ, ಗಣಪತಿ - ಲಕ್ಷ್ಮಿ ಪೂಜೆ ಮುಂತಾದುವನ್ನು ಜಂಗಮರು, ಕೆಲವು ಲಿಂಗಾಯತ ಮಠಾಧೀಶರೂ ಆಚರಿಸ ತೊಡಗಿದ್ದಾರೆ. ಇವರು ಮೊದಲಿನಿಂದಲೂ ವಾರದ ಮಲ್ಲಪ್ಪನವರು ಪುತ್ರಕಾಮೇಷ್ಟಿಯಜ್ಞ ಮಾಡುವಾಗ ಪ್ರತಿಭಟಿಸಿ ಅಗ್ನಿಕುಂಡದಲ್ಲಿ ವೀರೇಶ ಶರಣರು ಧುಮುಕಿದಂತೆ ತತ್ವನಿಷ್ಠೆಯನ್ನು ಪ್ರದರ್ಶಿಸಿದ್ದರೆ ಲಿಂಗಾಯತ ಸಮಾಜ ಇಂದಿನಂತೆ ತತ್ವ ಬಿಟ್ಟು ಸಾಗುತ್ತಿರಲಿಲ್ಲ. ತಾತ್ವಿಕವಾಗಿ ಕಠೋರವಾದರೆ ಭಕ್ತರು ಎಲ್ಲಿ ಕೈ ಬಿಡುತ್ತಾರೋ ಎಂಬ ಭಯ ಅವರಿಗೆ. ಒಂದು ವೇಳೆ ತಮ್ಮಲ್ಲೇ ದೇವ (ಲಿಂಗ) ನಿಷ್ಠೆ ಇದ್ದರೆ ಅವರು ತಮ್ಮ ಕೈಯಿಂದ ಅನ್ಯಾರಾಧನೆ ಮಾಡಲು ಸಾಧ್ಯವೇ ಇಲ್ಲ.

ಹಸಿವಿನ ತೃಪ್ತಿಗಾಗಿ ಯಾರ್‍ಯಾರೋ ಮಾಡಿದ ಅಡಿಗೆ ತಂದು ಲಿಂಗಕ್ಕೆ ಅರ್ಪಿಸುವವರನ್ನು ಕಂಡು ನನಗೆ ನಾಚಿಕೆಯಾಗುತ್ತದೆ. ಲಿಂಗದೇವನ ಶರಣರ ಪ್ರಸಾದವನ್ನು ಅಂದರೆ ದೀಕ್ಷಾವಂತನಾಗಿ ಗುರು-ಲಿಂಗ- ಜಂಗಮ ಪ್ರಸಾದವನ್ನು ಸ್ವೀಕರಿಸಿದ ಬಳಿಕ, ಶರಣ ಮಾರ್ಗಕ್ಕೆ ಹೊರತಾದ ಯಾವುದನ್ನೂ ಮಾಡಬಾರದು.(ಒಂದು ವೇಳೆ ತಪ್ಪು ಮಾಡಿದ ವ್ಯಕ್ತಿಯು ಪುನಃ ಜಂಗಮ ಪ್ರಸಾದವನ್ನು ಕೊಂಡು ಶುದ್ಧೀಕರಿಸಿಕೊಂಡರೂ ಅದು ಹಂದಿಯು ಸ್ನಾನ ಮಾಡಿದಂತೆ ಅಷ್ಟೆ!)

627. ಧಾರ್ಮಿಕ -ಸಾಮಾಜಿಕ ಸಾಮರಸ್ಯ

ಉಂಬಲ್ಲಿ ಉಡುವಲ್ಲಿ ಕ್ರೀಯಳಿಯಿತ್ತೆಂಬರು;
ಕೊಂಬಲ್ಲಿ ಕೊಡುವಲ್ಲಿ ಕುಲವನರಸುವರು,
ಎಂತಯ್ಯಾ, ಅವರ ಭಕ್ತರೆಂಬೆ?
ಎಂತಯ್ಯಾ, ಅವರ ಯುಕ್ತರೆಂಬೆ ?
ಲಿಂಗದೇವ ಕೇಳಯ್ಯಾ,
ಹೊಲತಿ ಶುದ್ಧ ನೀರ ಮಿಂದಂತಾಯಿತ್ತಯ್ಯಾ. -ಬ.ವ.ದೀ. 626

ಗುರು ಬಸವಣ್ಣನವರು ಹೊಸ ಧರ್ಮವಾಗಿ ಲಿಂಗಾಯತವನ್ನು ಕೊಟ್ಟಾಗ ಅನೇಕ ಕುಲ ಮತ್ತು ಜಾತಿಗಳವರು ಬಂದು ಸೇರಿದರು. ಬ್ರಾಹ್ಮಣನಿಂದ ಭಂಗಿಯವರೆಗೆ ಹಾರುವನಿಂದ ಹೊಲೆಯನವರೆಗೆ ದೀಕ್ಷೆಯನ್ನು ಪಡೆದುಕೊಂಡರು. ದೀಕ್ಷಾವಂತರು ಪ್ರಜ್ಞಾವಂತಿಕೆ ಬೆಳೆಸಿಕೊಂಡು ಒಬ್ಬರು ಮತ್ತೊಬ್ಬರ ಮನೆಗೆ ಹೋಗಿ ಉಣ್ಣುವುದು, ಉಡುವುದು ಮುಂತಾಗಿ ಮಾಡುತ್ತಿದ್ದರು. ಇದು ಎಷ್ಟೋ ಸಮಾಧಾನವನ್ನು ಗುರು ಬಸವಣ್ಣನವರಿಗೆ ಉಂಟು ಮಾಡುತ್ತಿತ್ತು. ಆದರೆ ಅಷ್ಟೇ ಬೇಸರ ಉಂಟು ಮಾಡುತ್ತಿದ್ದ ವಿಷಯವೆಂದರೆ ಹೆಣ್ಣು-ಗಂಡು ವ್ಯವಹಾರ ಮಾಡುವಾಗ ತಮ್ಮ ಮನೆಯಿಂದ ಹೆಣ್ಣು ಕೊಡುವಾಗ ಇತರ ಶರಣರ ಮನೆಯಿಂದ ಹೆಣ್ಣು ತೆಗೆದುಕೊಳ್ಳುವಾಗ ಹಿಂದಿನ ಕುಲವನ್ನು ಹುಡುಕುವಿಕೆ. ಈ ರೀತಿ ಭೇದ ಮಾಡುವವರನ್ನು ಭಕ್ತರು ಎನ್ನಲಾದೀತೆ ? ವಿವೇಕಿಗಳು ಎನ್ನಲಾದೀತೆ? ಇವರು ಹೇಗೆಂದರೆ ಮುಟ್ಟಾಗಿ ರಜೋಸ್ರಾವವಾಗುತ್ತಿರುವ ಮಹಿಳೆ ಶುದ್ಧ ನೀರಿನಲ್ಲಿ ಸ್ನಾನ ಮಾಡಿದಂತೆ. ಪುನಃ ಸ್ರಾವ ಆಗುತ್ತಲೇ ಇರುವಂತೆ ಅರ್ಥಂಬರ್ಥ ಭಕ್ತರ ಮನಸ್ಸೂ ಪುನಃ ಪುನಃ ಸಂದೇಹಕ್ಕೆ ಒಳಗಾಗುತ್ತದೆ.

ಕೆಲವು ವಿಚಾರವಾದಿಗಳು ಈ ವಾಕ್ಯ, ಹೊಲತಿ ಶುದ್ಧ ನೀರ ಮಿಂದಂತೆ ಎಂಬುದಕ್ಕೆ

ತಪ್ಪು ತಪ್ಪು ಅರ್ಥ ಮಾಡುವರು. ಈ ಹೋಲಿಕೆಯ ಮೂಲಕ ಮಹಿಳೆಯರನ್ನು ಅವಮಾನಿಸಲಾಗಿದೆ ಎಂದು ಕೆಲವರು, ಹೊಲೆಯರ ಹೆಣ್ಣು ಮಕ್ಕಳನ್ನು ಕುರಿತು ಮೂದಲಿಸಲಾಗಿದೆ ಎಂದು ಮತ್ತೆ ಕೆಲವರು ಅರ್ಥ ಮಾಡುವರು. ಹೊಲೆ ಎಂದರೆ ಇಲ್ಲಿ ರಜಸ್ವಲೆ ಎಂದು ಅರ್ಥ. ಮುಟ್ಟಾಗಿ ರಕ್ತ ಸ್ರಾವವಾಗುತ್ತಿರುವಾಗ ಸ್ನಾನ ಮಾಡಿದರೂ ಪುನಃ ಸ್ವಲ್ಪ ಹೊತ್ತಿಗೆ ಸ್ರಾವವಾಗುತ್ತದೆ ಎಂದು ಮಾತ್ರ ಇಲ್ಲಿ ಅರ್ಥ ಮಾಡಬೇಕು.

628. ಶರಣರ ಕೊಡುಗೆಯನ್ನು ವಿಷಯಕ್ಕೆ ಇಕ್ಕಬಾರದು

ಭಕ್ತರನಲ್ಲದೆ ಒಲ್ಲೆವೆಂದೆಂಬಿರಿ;
ಭಕ್ತರಿಗಲ್ಲದೆ ಕೈಯಾನೆವೆಂಬಿರಿ, ಇದೇನ ಮಾಡುವಿರಿ?
ಇದೆಲ್ಲಿಗೊಯ್ಯುವಿರಿ?
ಪಾವನವಾದುದನು ಲಿಂಗಕ್ಕೆ ಮಾಡುವುದೆ ಆಚಾರ.
ವಿಷಯಕ್ಕೆ ಇಕ್ಕಿ, ಅಧೋಗತಿಗಿಳಿಯದಿರಿ,
ಲಿಂಗದೇವನ ಶರಣರ ಒಡವೆಯಾ!

-ಬ.ವ.ದೀ. 627

ಗುರು ಬಸವಣ್ಣನವರು ಧರ್ಮಪ್ರಚಾರಕ ಜಂಗಮರಿಗೆ ಹೇಳಿರುವ ಅಮೂಲ್ಯವಾದ ಸಂದೇಶವಿದು. ಜಂಗಮರು ಧರ್ಮ ಪ್ರಸಾರ ಮಾಡುವ ತ್ಯಾಗಿಗಳೆಂದು ಶರಣರು ಅವರಿಗೆ ಹಣವನ್ನು (ಒಡವೆಯನ್ನು) ನೀಡಿದ್ದಾರೆ. ಅದನ್ನು ಅವರು ದುರ್ಬಳಕೆ ಮಾಡಿಕೊಂಡು ಇಂದ್ರಿಯ ಸುಖಕ್ಕೆ ಉಪಯೋಗಿಸಿದ್ದಾರೆ. ಬಹುಶಃ ವೇಶ್ಯೆಯರಿಗೆ ನೀಡಿರಬಹುದು. ಇದನ್ನು ಕಂಡು ನೊಂದು ಗುರು ಬಸವಣ್ಣನವರು ಹೇಳುತ್ತಾರೆ. "ನಾವು ಕೇವಲ ಭಕ್ತರ ಮನೆಗೆ ಹೋಗುತ್ತೇವೆ; ಪ್ರಸಾದ ಸ್ವೀಕಾರ ಮಾಡುತ್ತೇವೆ. ಭಕ್ತರಲ್ಲಿ ಮಾತ್ರ ಕೈಚಾಚಿ ಬೇಡುತ್ತೇವೆ. ಎಂದು ಹೇಳುತ್ತೀರಿ. ಆದರೆ ನೀವು ಮಾಡುತ್ತಿರುವುದು ಏನು? ನಿಮಗೆ ಬಂದ ಕಾಣಿಕೆಯನ್ನು ಎಲ್ಲಿಗೆ ಒಯ್ಯುತ್ತಿದ್ದೀರಿ? ಶರಣರು ಪವಿತ್ರ ಮನಸ್ಸಿನಿಂದ ಕೊಟ್ಟುದನ್ನು ಲಿಂಗಕ್ಕೆ ಸವೆಸುವುದು ಆಚಾರ. ಇಂದ್ರಿಯ ಸುಖ, ವಿಷಯ ತೃಪ್ತಿಗೆ ಕಳೆದು ಅಧೋಗತಿಗೆ ಇಳಿಯಬೇಡಿರಿ, ಪಾಪದ ಕೆಲಸ ಮಾಡಬೇಡಿರಿ."

629. ಶರಣರ ಪಥ

ಮಾರಿ ಮಸಣಿಯೆಂಬವು ಬೇರಿಲ್ಲ ಕಾಣಿರೋ!
ಮಾರಿಯೆಂಬುದೇನು?
ಕಂಗಳು ತಪ್ಪಿ ನೋಡಿದರೆ ಮಾರಿ,
ನಾಲಗೆ ತಪ್ಪಿ ನುಡಿದರೆ ಮಾರಿ,
ನಮ್ಮ ಲಿಂಗದೇವರ ನೆನಹ ಮರೆದಡೆ ಮಾರಿ!

-ಬ.ವ.ದೀ. 628

ಮಾರಿ (ಮಾರಮ್ಮ), ಮಸಣಿ (ಮಸಣಮ್ಮ) ಮುಂತಾದವು ಭಯ ಹುಟ್ಟಿಸುವ ಕ್ಷುದ್ರ ದೈವಂಗಳು. ಭಕ್ತಿಯಿಂದ ಪೂಜೆ ಮಾಡುವುದಕ್ಕಿಂತ ಭಯದಿಂದ ಪೂಜೆ ಮಾಡುವವರೇ

ಬಹಳ ಜನರು. ಅವು ಕುರಿ ಕೋಳಿ ಕೋಣಗಳನ್ನು ಬೇಡುತ್ತವೆ (?) ಕೊಡದಿದ್ದರೆ ಏನಾಗುತ್ತದೋ ಎಂದು ಬಲಿ ಕೊಡಲು ಜನರು ಮುಂದಾಗುತ್ತಾರೆ. ಇಂಥವರಿಗೆ ಗುರು ಬಸವಣ್ಣನವರು ಹೇಳುತ್ತಾರೆ. "ಮಾರಿ ಮಸಣಿ ಕೆಡಕು ಮಾಡುವ ದೈವಂಗಳು ಎಂದು ಭಯ ಗ್ರಸ್ತರಾಗುವಿರಲ್ಲ, ಅವಕ್ಕಿಂತಲೂ ಭಯಾನಕವಾದವು ಕಣ್ಣುಗಳು, ನಾಲಿಗೆ ಮತ್ತು ಮನಸ್ಸು, ಕಣ್ಣುಗಳು ತಪ್ಪು ಕೆಲಸ ಮಾಡುವುದರಿಂದ ಪಾಪವು; ಅದರ ಫಲವಾಗಿ ದೇವರಿಂದ ಶಿಕ್ಷೆ ಲಭ್ಯವಾಗುವುದು. ನಾಲಿಗೆ ತಪ್ಪಿನುಡಿದರೆ ಜಗಳಗಳು ಆಗಿ ಮನಸ್ಸು ಕೆಡುವವು, ಕೆಲವೊಮ್ಮೆ ಪ್ರಾಣಹರಣವೂ ಆಗಬಹುದು. ಪರಮಾತ್ಮ ಲಿಂಗದೇವನ ನೆನಹನ್ನು ಮರೆತು ಮನಸ್ಸು ಕೆಟ್ಟುದಕ್ಕೆ ಆಶ್ರಯವಿತ್ತರೆ ಅಂಥ ಮನಸ್ಸೇ ದೊಡ್ಡ ಮಾರಿಯಾಗಿ ವ್ಯಕ್ತಿಯನ್ನೇ ಬಲಿ ತೆಗೆದುಕೊಂಡು ಬಿಡಬಹುದು. ಆದ್ದರಿಂದ ಕಾಲ್ಪನಿಕ ಮಾರಿ ಮಸಣಿಗಳಿಗೆ ಹೆದರದೆ ನಿಮ್ಮ ಕಣ್ಣು, ನಾಲಿಗೆ, ಮನಸ್ಸುಗಳಿಗೇ ಹೆದರಿ ನಡೆಯಿರಿ.

630. ಸುಖ ಪ್ರಾಪ್ತಿಗೆ ಬೇಕು ಜ್ಞಾನ, ಮದ್ದಲ್ಲ

ಆಯುಧವಿಕ್ಕಿದವಂಗೆ ವೀರದ ಮಾತೇಕೆ?
ಲಿಂಗವು ಅಂತರಿಸಿದವಂಗೆ ಒಳುನುಡಿ ಏಕೆ?
ಐದೆ- ಅಣಚಿಯಿಲ್ಲದವಳಿಂಗೆ ಸೌಭಾಗ್ಯದ ಹೂವಿನ ಬೊಟ್ಟೇಕೆ?
ಸತ್ಯನಲ್ಲದವಂಗೆ ನಿತ್ಯನೇಮವೇಕೆ?
ಕರ್ತಾರ, ನಿಮ್ಮ ಒಲವಿಲ್ಲದವಂಗೆ ಶಂಭುವಿನ ಬಂಧುಗಳೇಕೆ?
ಲಿಂಗದೇವಯ್ಯಾ, ನೀನಿಲ್ಲದವಂಗೆ ಶಿವಾಚಾರದ ಮಾತೇಕೆ?

-ಬ.ವ.ದೀ. 629

ಯುದ್ಧದಲ್ಲಿ ಸೆಣೆಸಲಾರದೆ ಆಯುಧವನ್ನು ಕೈ ಬಿಟ್ಟು ಶರಣಾದವನು ವೀರತ್ವದ ಮಾತುಗಳನ್ನು ಆಡಿದರೆ ಅದು ಅರ್ಥರಹಿತವೂ, ಹಾಸ್ಯಾಸ್ಪದವೂ ಎನ್ನಿಸಿಕೊಳ್ಳುವುದು. ಅದೇ ರೀತಿ ಇಷ್ಟಲಿಂಗವನ್ನು ತೊರೆದವನು ಆದರ್ಶದ ಮಾತುಗಳನ್ನಾಡಿದರೆ ಅವಕ್ಕೆ ಅರ್ಥವೇ ಇರುವುದಿಲ್ಲ. ಗಂಡ ತೀರಿಕೊಳ್ಳುತ್ತಲೇ ತಾಳಿ ಮತ್ತು ಕುಂಕುಮದ ಬೊಟ್ಟನ್ನು ತೆಗೆಯಲಾಗುವುದು. ಮುತ್ತೈದೆಯ ಕುರುಹುಗಳಾದ ಸೌಭಾಗ್ಯದ ವಸ್ತು ಇಲ್ಲದವಳು ಹೂವನ್ನು ಮುಡಿಯುವುದು ಏಕೆ? ಪ್ರಾಮಾಣಿಕತೆಯೇ ಇಲ್ಲದ ಮನುಷ್ಯ ಯಾವ ನೇಮವನ್ನು ಮಾಡಿದರೆ ಏನಂತೆ? ಸೃಷ್ಟಿಕರ್ತನೇ, ನಿನ್ನ ಅನುಗ್ರಹ ಇಲ್ಲದೆ ಇರುವವನಿಗೆ ನಿನ್ನ ಬಂಧುಗಳಾದ ಶರಣರು ಏತಕ್ಕೆ? ಲಿಂಗದೇವನೆ ನಿನ್ನ ಕುರುಹಾದ ಇಷ್ಟಲಿಂಗ ಇಲ್ಲದವನು ಸಾಮಾಜಿಕ ಸಮಾನತೆ ಸೋದರತ್ವದ ಮಾತನಾಡುವುದು ಏಕೆ? ಏಕೆಂದರೆ, ಶಿವಾಚಾರ ಎಂದರೆ ಸಾಮಾಜಿಕ ಮತ್ತು ಧಾರ್ಮಿಕ ಸಮಾನತೆ. ಇದನ್ನು ತರುವುದು ಇಷ್ಟಲಿಂಗ. ಅದೇ ಇಲ್ಲದ ಮೇಲೆ ಶಿವಾಚಾರದ ಮಾತನ್ನೇಕೆ ಆಡಬೇಕು?

ಕೆಲವರು ಕೇಳುವುದುಂಟು ಇಷ್ಟಲಿಂಗಧಾರಣೆ ಇಲ್ಲದೆ ಸಮಾನತೆ ಸಾಧಿಸಲು ಸಾಧ್ಯವಿಲ್ಲವೆ? ಮಾನವ ಹುಟ್ಟುಗುಣಗಳಿಂದ ಪ್ರಚೋದಿತನಾಗಿ ಬಾಳುವ ಪ್ರಾಣಿ. ಇವನನ್ನು

ದೈವೀ ಮಾನವ - ಶರಣನನ್ನಾಗಿ ಮಾಡುವುದೇ ಧರ್ಮದ ಗುರಿ. ಅವನಿರುವ ಮಟ್ಟದಿಂದ ಮೇಲಕ್ಕೇರಬೇಕಾದರೆ ಧಾರ್ಮಿಕ ದೀಕ್ಷೆ ಶರಣರ ದೃಷ್ಟಿಯಲ್ಲಿ ಅತ್ಯಗತ್ಯ.

632. ನಾಸ್ತಿಕನಿಗೆ ಧರ್ಮದ ವಿಚಾರ ತಿಳಿಯದು

ಇರುಳೆಂದೇನೋ ಕುರುಡಂಗೆ? ಹಗಲೆಂದೇನೋ ಕುರುಡಂಗೆ?
ತಾಳವ ಬಾರಿಸಿದಡೇನೊ,
ಪಂಚಮಹಾವಾದ್ಯವ ನುಡಿಸಿದಡೇನೋ ಕಿವುಡಂಗೆ-
ಲಿಂಗದೇವಯ್ಯನ ಪಥವಿನ್ನಾವುದೆಂದರಿಯದವಂಗೆ ? -ಬ.ವ.ದೀ. 630

ಕುರುಡನಿಗೆ ಹಗಲು ಇರುಳು ಎರಡೂ ಒಂದೆ. ಕಣ್ಣೇ ಕಾಣಿಸದಿರುವುದರಿಂದ ಬೆಳಕು -ಕತ್ತಲೆ ಎರಡೂ ಒಂದೆ. ಕಿವುಡನಿಗೆ ತಾಳವ ಬಾರಿಸಿದರೇನು, ಪಂಚ ಮಹಾವಾದ್ಯವ ನುಡಿಸಿದರೇನು ಕೇಳಿ ಆನಂದಿಸಲಾರ. ಅದೇ ರೀತಿ ಲಿಂಗದೇವಯ್ಯನ ಪಥವನ್ನು ಅರಿಯದವನಿಗೆ ದೇವರು, ಅವನ ಅನುಗ್ರಹದ ಮಹಿಮೆ, ಗುರು ಕಾರುಣ್ಯದ ಮಹತಿ ಮುಂತಾದವು ಅರ್ಥವಾಗುವುದಾದರೂ ಹೇಗೆ?

632. ನಿಜವಾದ ಭಕ್ತಿ ಇಲ್ಲದ್ದು ವ್ಯರ್ಥ

ಸಿಂಗದ ನಡು ಮುರಿಯಲಾ ಸಿಂಗವೇನು ಬಾತೆ?
ಸುಂಡಿಲು ಮುರಿದಡೆ ಗಜವೇನು ಬಾತೆ?
ಸಂಗ್ರಾಮದಲ್ಲಿ ವೀರನುಳಿಯಲದೇನು ಬಾತೆ?
ಶೃಂಗಾರದ ಮೂಗು ಹೋದಡೆ ಶೃಂಗಾರವೇನು ಬಾತೆ?
ನಿಜ ತುಂಬಿದ ಭಕ್ತಿತುಳುಕಾಡದವರ ಸಂಗವೇನು ಬಾತೆ, ಲಿಂಗದೇವಾ?

-ಬ.ವ.ದೀ. 631

ಸಿಂಹದ ಓಟದ ರಹಸ್ಯ ಇರುವುದು ಅದರ ತೆಳುವಾದ ಸೊಂಟದಲ್ಲಿ, ಅತ್ಯಂತ ವೇಗವಾಗಿ ಹಾರಿ ಅದು ತನ್ನ ಬೇಟೆಯನ್ನು ಹಿಡಿಯುತ್ತದೆ. ಅಂಥ ಸೊಂಟವು ಮುರಿದು ಬಿಟ್ಟರೆ ಅಂಥ ಸಿಂಹದ ಶಕ್ತಿ ನಿಸ್ಸತ್ವಗೊಳ್ಳುವುದು. ಆನೆಯ ಶಕ್ತಿ ಇರುವುದು ಅದರ ಸೊಂಡಿಲಿನಲ್ಲಿ, ಸೊಂಡಿಲಿನಿಂದಲೇ ಅದು ಗಿಡಮರಗಳನ್ನು ಮುರಿಯುತ್ತದೆ, ಕಬ್ಬಿನ ಜಲ್ಲೆಯನ್ನು ಹಿಂಡುತ್ತದೆ. ಅಂಥ ಸೊಂಡಿಲೇ ಮುರಿದು ಹೋದರೆ ಆ ಆನೆಯಿಂದ ಪ್ರಯೋಜನವೇನು? ಯುದ್ಧಭೂಮಿಯಲ್ಲಿ ಹಿಮ್ಮೆಟ್ಟಿ ಓಡಿ ಹೋದ ಯೋಧ ಉಳಿದೂ ಪ್ರಯೋಜನವೇನು? ಹೇಡಿ ಎಂಬ ಬಿರುದನ್ನು ಅವನು ಹೊತ್ತುಕೊಂಡು ಬದುಕ ಬೇಕಾಗುತ್ತದೆ. ಮನುಷ್ಯನ ಮುಖದಲ್ಲಿ ಮುಖ್ಯವಾದ ಅಂಗ ಮೂಗು. ಅದರಿಂದಲೇ ಮುಖದ ಸೌಂದರ್ಯ. ಅಂಥ ಮೂಗು ಹೋದ ಬಳಿಕ (ಮೂಗು ಕತ್ತರಿಸುವ ಶಿಕ್ಷೆಗೆ ಒಳಗಾದವರು) ಬೇರೆ ಏನು ಶೃಂಗಾರ ಮಾಡಿಕೊಂಡರೆ ಏನಂತೆ? ಅದೇ ರೀತಿ ನಿಜವಾದ ಭಕ್ತಿ ಇಲ್ಲದೆ ಡಾಂಭಿಕ ಭಕ್ತಿಯಿಂದ ಕೂಡಿದ ಬೂಟಾಟಿಕೆಯವರ ಒಡನಾಟದಿಂದ ಏನೂ ಪ್ರಯೋಜನವಿಲ್ಲ!

633. ಶರಣರ ಪಥ

ಮುನ್ನಿನ ಆದ್ಯರ ಪಥಂಗಳು ಇನ್ನಾರಿಗೆಯೂ ಅಳವಡವು ನೋಡಾ!
ಬಲ್ಲೆನಾಗಿ ಒಲ್ಲೆನು -ಅವರು ಸಲ್ಲರು ಶಿವಪಥಕ್ಕೆ
ಒಳ್ಳಿಹ ಮೈಲಾರನ ಸಿಂಗಾರದಂತೆ,
ವೇಶಿಯ ಬಾಯ ಎಂಜಲನುಂಬ ದಾಸಿಯ ಸಂಸಾರದಂತೆ
ಲಿಂಗದೇವನ ಶರಣರನರಿಯದ ಉಳಿದ ಭಂಗಿತರ !

-ಬ.ವ.ದೀ. 632

ಮುನ್ನಿನ ಆದ್ಯರು ಎಂದರೆ ಮೊದಲು ಆಗಿ ಹೋದ ಪುರಾತನರು ಎಂದು ಅರ್ಥ ಮಾಡದೆ ಮೊದಲನೆಯ ಸಾಲಿನ ಶರಣರು ಎಂದು ಅರ್ಥಮಾಡಬೇಕು. ಸಪ್ತಗಣಾಧೀಶರಾದಿಯಾಗಿ ಪ್ರಮುಖ ಶರಣರು ಶಾಸನ ಕರ್ತರು. ಅವರು ಬೋಧಿಸುವ ಮಾರ್ಗ ಕಷ್ಟಸಾಧ್ಯವಾದುದು. ಹೆಚ್ಚಿನ ಜನಕ್ಕೆ ಅಳವಡುವುದಿಲ್ಲ. ಆದ್ದರಿಂದ ಅಂಥ ಅಳಿಮನದವರ ದೌರ್ಬಲ್ಯವನ್ನು ನಾನು ಬಲ್ಲೆನಾಗಿ, ನಾನು ಅವರನ್ನು ಒಲ್ಲೆನು. ಅವರು ಶಿವಪಥಕ್ಕೆ ಸಲ್ಲುವುದಿಲ್ಲ. ಸೆಣಬಿನಿಂದ ಮಾಡಿದ ಮೈಲಾರನಿಗೆ ಹೊರಗೆ ಶೃಂಗಾರ ಮಾಡಿರುತ್ತಾರೆ. ಆದರೆ ಅದರ ಒಳಗೆಲ್ಲ ಪೊಳ್ಳು. ಹಾಗೆ ಹೊರಗಡೆ ದೀಕ್ಷಾವಂತರಾಗಿ ಢಾಳಾಗಿ ವಿಭೂತಿ -ರುದ್ರಾಕ್ಷಿ ಧರಿಸಿ ಎದೆಯ ಮೇಲೆ ಲಿಂಗವನ್ನು ಕಟ್ಟಿರುತ್ತಾರೆ. ಆದರೆ ಒಳಗೆ ಭಕ್ತಿಯ ಸತ್ವ ಇರುವುದಿಲ್ಲ.

ವೇಶ್ಯೆಯು ದೇಹವನ್ನು ಮಾರಿಕೊಂಡು ವೈಭವದ ಜೀವನ ನಡೆಸುತ್ತಾಳೆ. ಆಕೆಯ ಬಳಿ ಊಳಿಗ ಮಾಡುವ ದಾಸಿಯು ಮಕ್ಕಳು - ಮರಿಯೊಡನೆ ಸುಖವಾದ ಜೀವನ ನಡೆಸುತ್ತಾಳೆ. ಆದರದು ಪಾಪದ ಜೀವನ. ಬಡವರಾದರೂ ಸರಿ ಶರಣರು, ಸಜ್ಜನರೂ, ಸದ್ಭಕ್ತರೂ ಆದವರ ಮನೆಯಲ್ಲಿ ಕಾಯಕ ಮಾಡಿದರೆ ಜೀವನ ಸಾರ್ಥಕ. ಪಾಪಮಯ ವೈಭವದ ವೇಶ್ಯೆಯ ಮನೆಗಿಂತ ಲಿಂಗದೇವನ ಶರಣರ ಮನೆಯ ಬಡತನದ ಬದುಕು ಪುಣ್ಯಕರ ಎಂದು ಅರಿಯದವರು ದೂಷಣೆಗೆ ಅರ್ಹರೇ ಸರಿ!

634. ಸುಖ ಪ್ರಾಪ್ತಿಗೆ ಬೇಕು ಜ್ಞಾನ, ಮದ್ದಲ್ಲ

ಗೀಜಗನ ಗೂಡು ಕೋಡಗದಣಲ ಸಂಚ,
ಬಾದುಮನ ಮದುವೆ, ಬಾವಲ ಬದ್ದಿನಂತೆ
ಜೂಜುಗಾರನ ಮಾತು, ಬೀದಿಯ ಗುಂಡನ ಸೊಬಗು,
ಓಡಿನೊಳಗೆ ಅಗೆಯ ಹೊಯ್ದಂತೆ, ಕಾಣಿರೋ!
ಶಿವನಾದಿಯಂತವನರಿಯದವನ ಭಕ್ತಿ
ಸುಖಶೋಧನೆಗೆ ಮದ್ದ ಕೊಂಡಂತೆ, ಲಿಂಗದೇವಾ!

-ಬ.ವ.ದೀ. 633

ಗೀಜಗನು ಬಹಳ ಕಷ್ಟಪಟ್ಟು ಗೂಡನ್ನು ಕಟ್ಟುತ್ತದೆ. ಅದು ಬಹಳ ಸುರಕ್ಷಿತವೂ ಕಲಾತ್ಮಕವೂ ಆಗಿರುತ್ತದೆ. ತನ್ನ ವಾಸಕ್ಕಾಗಿ ಮತ್ತು ಸಂತಾನ ಸಂರಕ್ಷಣೆಗಾಗಿ ಅದು ಗೂಡುಕೊಟ್ಟುತ್ತದೆ. ಆದರೆ ಚಪಲ ಚಿತ್ತದ ಕೋತಿಯು ಜಿಗಿದಾಡುತ್ತ ಬಂದು ಆ ಗೂಡನ್ನು ಕಿತ್ತು ಹಾಕುತ್ತದೆ; ಗೀಜಗನ

ಪ್ರಯತ್ನವನ್ನು ವ್ಯರ್ಥ ಮಾಡುತ್ತದೆ. ಅದೇ ರೀತಿ ಬೊಂಬೆಗಳ (ಬಾದುಮ) ಮದುವೆ. ಮಕ್ಕಳು ಗೊಂಬೆಗಳನ್ನಿಟ್ಟುಕೊಂಡು ಅವುಗಳಿಗೆ ಮದುವೆ ಮಾಡಿಸುವ ಆಟ ಆಡುತ್ತಾರೆ. ಇದು ಕೇವಲ ಆಟವಾಗುವುದೇ ವಿನಾ ಪ್ರಯೋಜನಕಾರಿಯಲ್ಲ. ತೊಗಲ ಬಾವಲಿ ಕೊಡುವ ಊಟದ ಔತಣ ಅಸಾಧ್ಯದ ಮಾತು. ಅದು ರಾತ್ರಿ ವೇಳೆ ಹಾರಾಡುವ, ಭೂಮಿಯ ಮೇಲೆ ಕೊಳೆಯನ್ನು ಹರಡುವ ಪ್ರಾಣಿ.

ಜೂಜುಗಾರರಲ್ಲಿ ಒಂದು ಕಲೆ ಇರುತ್ತದೆ. ಅವರು ಅಮಾಯಕರಂತೆ ಮಾತನಾಡಿ ದುಡ್ಡನ್ನು ಜನರಿಂದ ಪಡೆದು, ಜೂಜಿನಲ್ಲಿ ಕಳೆಯುತ್ತಾರೆ. ಆದ್ದರಿಂದ ಅವರ ಮಾತು ನಂಬಲರ್ಹವಲ್ಲ. ಅದೇ ರೀತಿ ಬೀದಿಯ ಗುಂಡ ಚೆಂದವಾಗಿ ಅಲಂಕಾರ ಮಾಡಿಕೊಂಡು ಯಾವ ಜವಾಬ್ದಾರಿಯೂ ಇಲ್ಲದೆ ಅಲೆಯುತ್ತ ಇರುತ್ತಾನೆ. ಶೃಂಗಾರ ಪುಟ್ಟಸ್ವಾಮಿ ಎಂಬ ಬಿರುದು ಅವನಿಗೆ ! ಇವರೆಲ್ಲರ ಜೀವನ ಒಂದು ಹಂಚಿನಲ್ಲಿ ಸಸಿಯನ್ನು ಊರಿದಂತೆ ಇರುತ್ತದೆ. ಅದು ಕೆಳಗೆ ಬೇರು ಬಿಡಲು ಮಣ್ಣಿನ ಆಶ್ರಯ ಇರುವುದಿಲ್ಲ. ಅದೇ ರೀತಿ ದೇವರ ಸ್ವರೂಪ, ಅವನ ಆದಿ-ಅಂತ್ಯವನ್ನು ಅರಿಯದ ಭಕ್ತನ ಸಾಧನೆ ಸುಖವನ್ನು ಪಡೆಯಲು ಔಷಧಿಯನ್ನು ತಿಂದಂತೆ ಇರುತ್ತದೆ. ಸುಖ ಎಂಬುದು ಅಂತರಂಗದಲ್ಲಿ ಕೆಲವೊಂದು ಮೌಲ್ಯಗಳ ಸಂಪಾದನೆಯಿಂದ ಪಡೆದುಕೊಳ್ಳಬಹುದಾದ ಅನುಭವವೇ ವಿನಾ ಹೊರಗಡೆಯಿಂದ ಮದ್ದು (ಔಷಧಿ) ತಿಂದು ಪಡೆಯಬಹುದಾದ ವಸ್ತುವಲ್ಲ.

ಇನ್ನು ಕೆಲವರು ಜ್ಞಾನವನ್ನು ಪಡೆದುಕೊಳ್ಳದೆ ಪರಮಾತ್ಮನ ಅನುಭವವನ್ನು ಪಡೆಯುತ್ತೇವೆ ಎಂದು ಭಂಗಿ, ಅಫೀಮು ಸೇದುವರು; ಸಾರಾಯಿ ಕುಡಿದು ಅನಾಚಾರದ ಮಾರ್ಗದಲ್ಲಿ ನಡೆಯುವರು. ಇದೆಲ್ಲ ಶರಣ ಪಥಕ್ಕೆ ಸಹ್ಯವಲ್ಲ, ಮಾನ್ಯವಲ್ಲ.

635. ಕುಚ್ಚಿತರ ಸಂಗ ಬೇಡ

ತೊತ್ತಿನ ಕೊರಳಲ್ಲಿ ಹೊಂಬಿತ್ತಾಳೆಯ ಸಿಂಗಾರವ ಮಾಡಿದಂತೆ,
ಕುಚ್ಚಿತರ ಸಂಗ ಸುಸಂಗಿಗೆ ಸಂಗವಲ್ಲ !
ಗುಲಗುಂಜಿ ಮಾಣಿಕಕ್ಕೆ ಸರಿಯಪ್ಪುದೆ, ಲಿಂಗದೇವಾ?

-ಬ.ವ.ದೀ. 634

ಮನೆಯ ಸೇವಕಿಯ ಕೊರಳಲ್ಲಿ ಹೊಂಬಿತ್ತಾಳೆಯ ಗಿಲೀಟಿನ ಒಡವೆಗಳನ್ನು ಹಾಕಿದಂತೆ ನೋಡುತ್ತಿದ್ದಂತೆಯೇ ತಿಳಿಯುತ್ತದೆ ಸೇವಕಿ ಹಾಕಿರುವುದು ಕೃತಕ ಆಭರಣ ಎಂದು. ಅದೇ ರೀತಿ ಕೆಟ್ಟ ಜನರ ಸಂಗವನ್ನು ಉತ್ತಮನು ಮಾಡಿದರೆ ಅವನ ಚಾರಿತ್ರ್ಯಕ್ಕೆ ಕಳಂಕ ಬರುತ್ತದೆ. ಅಮೂಲ್ಯವಾದ ಮಾಣಿಕ್ಯಕ್ಕೆ ಸಮವೆಂದು ಗುಲಗಂಜಿಯನ್ನು ಪರಿಗಣಿಸಲಾದೀತೆ? ಆದ್ದರಿಂದ ಪರಿವರ್ತಿಸುತ್ತೇವೆಂದು ದುರ್ಜನರ ಒಡನಾಟ ಮಾಡಿ ಕೆಲವೊಮ್ಮೆ ಸಜ್ಜನರೇ ದಾರಿ ತಪ್ಪುವ ಸಾಧ್ಯತೆ ಇರುವುದರಿಂದ ಕುಚ್ಚಿತರ ಸಂಗ ಮಾಡಬಾರದು.

636. ಕೇವಲ ಜ್ಞಾನಿಗಳ ಸ್ತುತಿ ಮಾಡಿದರೆ ಸಾಲದು

ಕೆಂಚ ಕರಿಕನ ನೆನೆದಡೆ ಕರಿಕನಾಗಬಲ್ಲನೆ?

ಕರಿಕ ಕೆಂಚನ ನೆನೆದಡೆ ಕೆಂಚನಾಗಬಲ್ಲನೆ?
ದರಿದ್ರ ಸಿರಿವಂತನ ನೆನೆದಡೆ ಸಿರಿವಂತನಾಗಬಲ್ಲನೆ?
ಸಿರಿವಂತ ದರಿದ್ರನ ನೆನೆದಡೆ ದರಿದ್ರನಾಗಬಲ್ಲನೆ
ಮುನ್ನಿನ ಪುರಾತರ ನೆನೆದು ಧನ್ಯನಾದಹೆನೆಂಬ
ಮಾತಿನ ರಂಜಕರನೇನೆಂಬೆ ಲಿಂಗದೇವಾ? —ಬ.ವ.ದೀ. 635

ಕೆಲವರು ತಮ್ಮ ಜೀವನದಲ್ಲಿ ಸಾಧನೆ, ಅನುಷ್ಠಾನ ಮಾಡುವ ಬದಲು ಹಿಂದಿನವರನ್ನು ಹೃದಯ ತುಂಬಿ ಹೊಗಳುವುದರಲ್ಲೇ ಕಾಲ ಕಳೆಯುತ್ತಾರೆ. ಅಂಥವರಿಗೆ ಗುರು ಬಸವಣ್ಣನವರ ಉಪದೇಶ ಹೀಗಿದೆ. ಕೆಂಪಗಿರುವವನು ಕಪ್ಪಗಿರುವವನನ್ನು ನೆನೆದುಕೊಂಡರೆ ಅವನೇನು ಕಪ್ಪಾಗನು. ಕಪ್ಪಗಿರುವವನು ಕೆಂಪಗಿರುವವನ್ನುನು ಸ್ಮರಿಸುತ್ತಿದ್ದರೆ ಅವನೇನು ಬೆಳ್ಳಗಾಗನು. ದರಿದ್ರನು ಸಿರಿವಂತನ ನೆನೆದಡೆ ತನ್ನ ದಾರಿದ್ರ್ಯ ಕಳೆದುಕೊಂಡು ಸಿರಿವಂತನಾಗನು. ಆಗಬೇಕಾದರೆ ಪರಿಶ್ರಮ ಪಡಬೇಕು. ಹಾಗೆ ಬರೀ ಹಿಂದಿನವರನ್ನು ನೆನೆದು ತಾವು ಧನ್ಯರಾದೆವು ಎಂದುಕೊಳ್ಳುವವರು ಮಾತಿನ ರಂಜಕರೇ ವಿನಾ ನಿಜ ಸಾಧಕರಲ್ಲ.

637. ದೇವರ ಜ್ಞಾನವಿಲ್ಲದ ಅಜ್ಞಾನಿ

ಆನೆಯನೇರಿಕೊಂಡು ಹೋದಿರೆ ನೀವು.
ಕುದುರೆಯನೇರಿಕೊಂಡು ಹೋದಿರೆ ನೀವು
ಕುಂಕುಮ ಕಸ್ತೂರಿಯ ಪೂಸಿಕೊಂಡು ಹೋದಿರೆ, ಅಣ್ಣಾ!
ಸತ್ಯದ ನಿಲವನರಿಯದೆ ಹೋದಿರಲ್ಲಾ!
ಸದ್ಗುಣವೆಂಬ ಫಲವ ಬಿತ್ತದೆ ಬೆಳೆಯದೆ ಹೋದಿರಲ್ಲಾ!
ಅಹಂಕಾರವೆಂಬ ಸದಮದಗಜವೇರಿ
ವಿಧಿಗೆ ಗುರಿಯಾಗಿ ನೀವು ಹೋದಿರಲ್ಲಾ!
ನಮ್ಮ ಲಿಂಗದೇವರನರಿಯದೆ ನರಕಕ್ಕೆ ಭಾಜನವಾದಿರಲ್ಲಾ!

ಗುರು ಬಸವಣ್ಣನವರ ಬಹು ಜನಪ್ರಿಯ ವಚನಗಳಲ್ಲಿ ಇದೂ ಒಂದು. ಆನೆ-ಅಧಿಕಾರದ ಸಂಕೇತ. ಕುದುರೆಯು ಸಂಪತ್ತಿನ ಸಂಕೇತ, ಕುಂಕುಮ - ಕಸ್ತೂರಿಗಳು ಶೃಂಗಾರದ ಸಂಕೇತ ಅಧಿಕಾರವೆಂಬ ಆನೆಯನ್ನು ಏರಿ ಮದದಿಂದ ಬೀಗುತ್ತಿರುವವರೇ, ಕುದುರೆಯೆಂಬ ಸಂಪತ್ತನ್ನು ಏರಿ ಧನ ಮದದಿಂದ ಬೀಗುತ್ತಿರುವ ಶ್ರೀಮಂತರೇ, ಶರೀರ ಭೋಗವಾದ ಶೃಂಗಾರದಲ್ಲಿ ಕಾಲ ಕಳೆಯುತ್ತಿರುವ ಅಂಗ ಭೋಗಿಗಳೇ ನೀವೇಕೆ ನಿಜವಾದ ಸತ್ಯವನ್ನು ಅರಿಯುವ ಪ್ರಯತ್ನ ಮಾಡುತ್ತಲಿಲ್ಲ. ಮಾನವ ದೇಹವೆಂಬ ಕ್ಷೇತ್ರ ಇರುವುದು ಸದ್ಗುಣಗಳೆಂಬ ಫಲವನ್ನು ಬಿತ್ತಿ ಬೆಳೆಯಲಿಕ್ಕೆ. ಅಧಿಕಾರವಿದೆ ಎಂದು ನೀವು ಆನೆಯನೇರಿದವರು, ಸಂಪತ್ತಿದೆ ಎಂದು ನೀವು ಕುದುರೆಯನ್ನೇರಿದವರು, ಶರೀರದಲ್ಲಿ ಸೌಂದರ್ಯವಿದೆ ಎಂದು ವೈಯ್ಯಾರ ಮಾಡುವ ನೀವು ಅಹಂಕಾರ ಎಂಬ ಉನ್ಮತ್ತ ಆನೆಯನ್ನು ಏರಿ ಹೊರಟದ್ದೀರಿ. ಇದು ನಿಮ್ಮನ್ನು ವಿಧಿಯ ಬಾಯಿಗೆ ಕೆಡವದೇ ಬಿಡದು! ನಿತ್ಯವೂ ಪರಮಸತ್ಯವೂ ಆದ ಲಿಂಗದೇವನನ್ನು ನಂಬದೆ, ಅರಿಯದೆ ನಿಮ್ಮ ಜೀವನವನ್ನು ನರಕಕ್ಕೆ ಭಾಜನ ಮಾಡುತ್ತಿದ್ದೀರಲ್ಲಾ!

639. ಪರಧನ, ಪರಸತಿ ವರ್ಜ್ಯ

ಇಂದ್ರಿಯ ನಿಗ್ರಹವ ಮಾಡಿದಡೆ ಹೊಂದುವುವು ದೋಷಂಗಳು:
ಮುಂದೆ ಬಂದು ಕಾಡುವುವು ಪಂಚೇಂದ್ರಿಯಂಗಳು!
ಸತಿಪತಿರತಿಸುಖವ ಬಿಟ್ಟರೆ ಸಿರಿಯಾಳ ಚಂಗಳೆಯರು!
ಸತಿಪತಿರತಿಭೋಗೋಪಭೋಗ ವಿಳಾಸವ
ಬಿಟ್ಟನೇ ಸಿಂಧು ಬಲ್ಲಾಳನು?
ನಿಮ್ಮ ಮುಟ್ಟಿ ಪರಧನ- ಪರಸತಿಯರಿಗೆಳಸಿದಡೆ
ನಿಮ್ಮ ಚರಣಕ್ಕೆ ದೂರ, ಲಿಂಗದೇವಾ!

—ಬ.ವ.ದೀ. 637

ಗುರು ಬಸವಣ್ಣನವರ ಜನಪ್ರಿಯ ಮತ್ತು ಅಮೂಲ್ಯ ಸಂದೇಶಗಳಿರುವ ವಚನಗಳಲ್ಲಿ ಇದು ಪ್ರಮುಖವಾದುದು. ಸಾಮಾಜಿಕವಾಗಿ ಎರಡು ಬಗೆಯ ಜನರುಂಟು. 1.ನಿವೃತ್ತಿ ಮಾರ್ಗದಲ್ಲಿ ಇರುವವರು-ವಿರಕ್ತರು,ಸನ್ಯಾಸಿಗಳು; ಪ್ರವೃತ್ತಿ ಮಾರ್ಗದಲ್ಲಿ ಇರುವವರು;ಗೃಹಸ್ಥರು. ಇವರ ಸಂಖ್ಯೆಯೇ ಸಮಾಜದಲ್ಲಿ ಅಧಿಕ, ಈ ವಚನದಲ್ಲಿ ಪ್ರವೃತ್ತಿ ಮಾರ್ಗದಲ್ಲಿ ಇರುವ ಗೃಹಸ್ಥರಿಗೆ ದಿವ್ಯ ಸಂದೇಶವನ್ನು ಗುರು ಬಸವಣ್ಣನವರು ನೀಡುತ್ತಿದ್ದಾರೆ. ಇಂದ್ರಿಯ ನಿಗ್ರಹವ ಮಾಡಿದರೆ ಹೊಂದುವವು ದೋಷಂಗಳು : ಇಂದ್ರಿಯಗಳು ಪುಟಿಯುವ ಚಂಡು ಇದ್ದಂತೆ. ಎಷ್ಟು ಶಕ್ತಿಶಾಲಿಯಾಗಿ ಎಸೆಯುತ್ತೇವೋ ಅಷ್ಟೇ ವೇಗದಿಂದ ಹಿಂದಕ್ಕೆ ಪುಟಿಯುವ ಚಂಡಿನಂತೆ ಇಂದ್ರಿಯಗಳು ಹತ್ತಿಕ್ಕಿದಷ್ಟೂ ಸಿಡಿಯುತ್ತವೆ. ಅವುಗಳನ್ನು ನಿಗ್ರಹಿಸಲು ಇರುವುದು ಎರಡೇ ದಾರಿ. 1. ಉದಾತ್ತೀಕರಣ 2. ಉಪಯೋಗೀಕರಣ, ಉದಾತ್ತೀಕರಣವು ವಿರಕ್ತರಿಗೆ ಅಗತ್ಯ. ಗೃಹಸ್ಥರಿಗೆ ಉಪಯೋಗೀಕರಣದ ದಾರಿ ಉಂಟು. ಒಟ್ಟಾರೆ ಹತ್ತಿಕ್ಕಬಾರದು; ಹತ್ತಿಕ್ಕಿದರೆ ಮಾನಸಿಕ ವಿಕಾರಕ್ಕೆ ಕಾರಣವಾಗುವುದು. ಪುನಃ ಪುನಃ ಹತ್ತಿಕ್ಕಲ್ಪಟ್ಟ ಇಂದ್ರಿಯಗಳು ಪುಟಿಪುಟಿದು ಕಾಡುತ್ತವೆ. ಸಿರಿಯಾಳ -ಚಂಗಳೆಯರು, ಸಿಂಧು ಬಲ್ಲಾಳ ಮುಂತಾದವರೆಲ್ಲರು ಸಂಸಾರ ಜೀವನದಲ್ಲಿಯೇ ಇದ್ದರಲ್ಲವೆ? ವಿರಕ್ತನಾದವನು ಹೆಣ್ಣು -ಹೊನ್ನು- ಮಣ್ಣುಗಳಿಂದ ದೂರವಿದ್ದರೆ ಗೃಹಸ್ಥನು ಕಾಯಕದಿಂದ ಗಳಿಸಿದ ಸ್ವಧನ, ವಿವಾಹವಾದ ಸ್ವಸ್ತ್ರೀಯಲ್ಲಿ ಮಾತ್ರ ಅನುರಕ್ತನಾಗಿ ಪರಧನ, ಪರಸ್ತ್ರೀಯಿಂದ ದೂರವಿರಬೇಕು. ಗೃಹಸ್ಥನು ಪರಸ್ತ್ರೀಯನ್ನು ತಾಯಿಯೆಂದು ಪರಧನವನ್ನು ಕಿಲ್ಬಿಷವೆಂದು ಮುಟ್ಟದೆ ಇದ್ದರೆ ವಿರಕ್ತನು ಸ್ತ್ರೀಯನ್ನು ತಾಯಿಯ ಸ್ವರೂಪದಲ್ಲಿ ಗೌರವಿಸಬೇಕು. ಸಮಾಜ ಸೇವೆಗಾಗಿ ಮಣ್ಣು(ಭೂಮಿ) ಮತ್ತು ಹೊನ್ನನ್ನು ಹಿಡಿದಿದ್ದರೂ ಅದರಲ್ಲಿ ಸ್ವಾರ್ಥದ ಸೋಂಕಿಲ್ಲದೆ ಪರಾರ್ಥಕ್ಕಾಗಿ ಹಿಡಿದಿರಬೇಕು. ಹಾಗಲ್ಲದೆ ಗೃಹಸ್ಥನು ಪರಧನ, ಪರಸ್ತ್ರೀಗೆ ಎಳೆಸಿದರೆ ಲಿಂಗದೇವನಿಗೆ ದೂರವಾಗುವನು.

639. ಅಪವಿತ್ರ ದೃಷ್ಟಿ ಬೇಡ.

ಲಿಂಗ ಜಂಗಮ ಒಂದೆ ಎಂದು ನಂಬಿದ ಬಳಿಕ
ಅವರಂಗನೆಯರು ಲಿಂಗದ ರಾಣಿವಾಸ;

ಅಲ್ಲಿಯೂ ಮೇಳ, ಇಲ್ಲಿಯೂ ಮೇಳ,
ಚೌಡೇಶ್ವರಿಯಲ್ಲಿಯೂ ಮೇಳ!
ಮೊಲೆಯುಂಬ ಭಾವ ತಪ್ಪಿ ಅಪ್ಪಿದವರ
ತಲೆಯ ಕೊಂಬ ಲಿಂಗದೇವ.

-ಬ.ವ.ದೀ. 638

ಲಿಂಗದೇವನು ನಿರಾಕಾರ, ಸಮಾಜವು ಅವನ ಸಾಕಾರ ಮುಖ. ದೇವನು ನಿರಾಕಾರ ಅವನ ಸಾಕಾರ ಪ್ರತಿನಿಧಿಯೇ ಜಂಗಮ. ಈ ದೃಷ್ಟಿಯಿಂದ ಭಕ್ತ-ಜಂಗಮ ಸಂಬಂಧ ಅತ್ಯಂತ ಪವಿತ್ರವಾದುದು. ಜಂಗಮರನ್ನು ಗೃಹಸ್ಥರ ಮನೆಗೆ ಆಹ್ವಾನಿಸುವರು. ಪೂಜೆ -ಪ್ರಸಾದ ಮಾಡಿಸುವರು. ಕೆಲವೊಮ್ಮೆ ಜಂಗಮರು ಆಹ್ವಾನವಿಲ್ಲದೆ ಪ್ರವಾಸ ಕಾಲದಲ್ಲಿ ಆಕಸ್ಮಿಕವಾಗಿ ಭಕ್ತರ ಮನೆಗೆ ಹೋಗುವರು (ನುಗ್ಗು ಬಿನ್ನಹ). ಆಗ ಮನೆಯಲ್ಲಿ ಗಂಡಸರು ಇರಲಿಕ್ಕಿಲ್ಲ. ಅಂಥ ಪ್ರಸಂಗದಲ್ಲಿ ಭಕ್ತರ ಅಂಗನೆಯರು ಲಿಂಗದೇವನ ಪತ್ನಿ ಎಂಬ ಭಯದಿಂದ ಎಚ್ಚರಿಕೆಯಿಂದ ವರ್ತಿಸಬೇಕು. ಕೆಲವೊಮ್ಮೆ ಕೆಲವು ಮಹಿಳೆಯರು ಚಂಚಲೆಯರಿದ್ದು ತಾವಾಗಿ ಲೈಂಗಿಕವಾಗಿ ಪ್ರಚೋದಿಸಲೂಬಹುದು. ಇಂಥ ಅನುಭವಗಳು ವೈರಾಗ್ಯ ಸಾಧಕರಿಗೆ ಎದುರಾಗಬಹುದು. ಆಗ ಅವರು ಪರಸ್ತ್ರೀಯಾದ ಈಕೆಯೂ ಹೆಣ್ಣಲ್ಲವೇ ಎಂದು ಬೆರೆಯಲು ಎಳಸಬಾರದು. ಮೊಲೆಯುಂಬ ಭಾವ ಅಂದರೆ ಈಕೆ ನನ್ನ ಸಾಕ್ಷಾತ್ ತಾಯಿ ಎಂಬ ಭಾವ ತಪ್ಪಿ ಅಪ್ಪಲು ಹೋದರೆ ಲಿಂಗದೇವನು ತಲೆದಂಡವನ್ನೇ ಕೊಳ್ಳದೆ ಇರನು.

640. ಪರವಧುವಿನೊಡನೆ ಸರಸ ಬೇಡ.

ಒಡೆಯರು ತಮ್ಮ ಮನೆಗೆ ಒಡಗೊಂಡು ಹೋದಡೆ,
ತುಡುಗುಣಿತನದಲ್ಲಿ ಪರವಧುವ ನೋಡುವ ಸರಸ ಬೇಡ;
ಕಾಣಿರಣ್ಣಾ! ಒಡೆಯನರಸಿಯ ಸರಸ ಬೇಡ!
ಕೂಳ ಸೊಕ್ಕು ತಲೆಗೇರಿ ರಾಣಿವಾಸದೊಡನೆ ಸರಸ ಬೇಡ;
ಲಿಂಗದೇವರು ಕರ ಸಿತಗನಯ್ಯಾ!

-ಬ.ವ.ದೀ. 638

ಜಂಗಮ ಭಕ್ತನಿಗೆ ಒಡೆಯ. ಇದು ದಿಟ. ಆದರೆ ಜಂಗಮನನ್ನು ಅಂದರೆ ಧರ್ಮ ಪ್ರಚಾರಕರನ್ನು ಪೋಷಿಸುವ ಭಕ್ತರೇ ನಿಜಾರ್ಥದಲ್ಲಿ ಒಡೆಯರು. ಭಕ್ತರೆಂಬ ಒಡೆಯರು ತಮ್ಮ ಮನೆಗೆ ಪೂಜೆ -ಪ್ರಸಾದ -ವಾಸ್ತವ್ಯಕ್ಕೆಂದು ಜಂಗಮರನ್ನು ಕರೆದುಕೊಂಡು ಹೋದಾಗ ಕಳ್ಳ ನೋಟವನ್ನು ಬೀರಿ ಮನೆಯೊಡತಿಯನ್ನು (ಅಥವಾ ಇತರ ಮಹಿಳೆಯರನ್ನು) ನೋಡುವ ಹುಡುಗಾಟ ಬೇಡ. ಭಕ್ತರ ನಂಬಿಕೆಗೆ ದ್ರೋಹ ಬಗೆಯಬಾರದು. ಕೂಳಿನ ಸೊಕ್ಕು ತಲೆಗೇರಿ ಭಕ್ತರ ಪತ್ನಿಯರೊಡನೆ ಸರಸ ಮಾಡಲು ಹೋಗಬಾರದು. ಪರಮಾತ್ಮನು ಬಲು ಕೋಪಿಷ್ಟ. ಇಂಥ ವಿಶ್ವಾಸ ದ್ರೋಹಕ್ಕೆ ಭಯಂಕರ ಶಿಕ್ಷೆಯನ್ನು ಕೊಡುವನು.

641. ಪರಸ್ತ್ರೀಯ ಒಡನಾಟ ಬೇಡ.

ನೋಡಲಾಗದು ನುಡಿಸಲಾಗದು ಪರಸ್ತ್ರೀಯ; ಬೇಡ ಕಾಣಿರೊ.

ತಗರ ಬೆನ್ನಲಿ ಹರಿವ ಸೊಣಗನಂತೆ ಬೇಡ ಕಾಣಿರೊ!
ಒಂದಾಸೆಗೆ ಸಾಸಿರ ವರುಷ ನರಕದೊಳದ್ದುವ ಲಿಂಗದೇವ !

-ಬ.ವ.ದೀ. 639

ಜಂಗಮರಿಗೆ ಮಾತ್ರವಲ್ಲ ಪ್ರತಿಯೊಬ್ಬರಿಗೂ ನೀಡಿರುವ ಸಂದೇಶವಿದು. ನೈತಿಕ ಮೌಲ್ಯಗಳು ಕುಸಿಯುತ್ತಿರುವ ಇಂದಿನ ದಿನ ಮಾನದಲ್ಲಿ ಎಲ್ಲರಿಗೂ ಗುರು ಬಸವಣ್ಣನವರ ಸಂದೇಶ ಅನ್ವಯವಾಗುತ್ತದೆ. ಪರಸ್ತ್ರೀಯರೊಡನೆ ಚೆಲ್ಲಾಟವಾಡುವುದು, ಅವರನ್ನು ಕದ್ದು ಕದ್ದು ನೋಡುವುದು, ಅವರೊಡನೆ ಮಾತನಾಡಲು ಪ್ರಯತ್ನಿಸುವುದು ಸರ್ವಥಾ ಸರಿಯಲ್ಲ. ಅಂಥ ವರ್ತನೆಯಿಂದ ಗಂಡನಲ್ಲಿ ಪತ್ನಿಯ ಬಗ್ಗೆ ಸಂದೇಹ ಹುಟ್ಟಬಹುದು, ಬಿರುಕು ಮೂಡಬಹುದು. ಟಗರಿನ ಬೆನ್ನು ಹತ್ತಿ ಅಡ್ಡಾಡುವ ನಾಯಿಯಂತೆ ವರ್ತಿಸಬಾರದು. ಉದಾಹರಣೆ ಅಶ್ಲೀಲವಾಗಿದೆ. ಆದರೆ ವಿಷಯ ಮನವರಿಕೆಯಾಗಲೆಂದು ಅನಿವಾರ್ಯವಾಗಿ ಬರೆಯುತ್ತಿದ್ದೇನೆ. ಟಗರಿನ ಜನನೇಂದ್ರಿಯ ಹೊರಚಾಚಿದಾಗ ಕೆಂಪು ಬಣ್ಣದ ಮಾಂಸದ ಮುದ್ದೆಯಂತೆ ಕಾಣುವುದು. ಇದನ್ನು ಮಾಂಸವೆಂದು, ಅದು ಬೀಳುತ್ತದೆಂದು, ಅದನ್ನು ತಿನ್ನಬೇಕೆಂದು ನಾಯಿಯು ಬೆನ್ನತ್ತಿ ತಿರುಗುವುದು. ಕಡೆಗೆ ಸಿಟ್ಟಿಗೆದ್ದ ಟಗರು ತನ್ನ ಕೊಂಬಿನಿಂದ ತಿವಿಯಲು ಮುಂದಾದಾಗ ಪೆಚ್ಚಾಗಿ ಓಡುವುದು. ಹಾಗೆ ಪರಸ್ತ್ರೀಯು ಕೈಗೆ ಸಿಗುವಳೇನೋ ಎಂದು ತಿರುಗುವ ವ್ಯಕ್ತಿ ಆಕೆ ತಿರುಗಿಬಿದ್ದು ಸಿಟ್ಟಿಗೆದ್ದಾಗ ಪೆಚ್ಚಾಗಿ ನಿಲ್ಲುವನು, ಸಾಮಾಜಿಕವಾಗಿ ಅವಮಾನಿತನೂ ಆಗಬಹುದು. ಪರಸ್ತ್ರೀಯನ್ನು ಪಡೆಯಬೇಕು ಎಂಬ ಒಂದು ಆಸೆಗಾಗಿ ಸಾವಿರ ವರ್ಷದ ನರಕ ಪ್ರಾಪ್ತಿಯಾಗುವ ಸಂಭವವಿರುತ್ತದೆ.

642. ತೊರೆಯಿಂ ಬೋ!

ತೊರೆಯ ಮೀವ ಅಣ್ಣಗಳಿರಾ, ತೊರೆಯ ಮೀವ ಸ್ವಾಮಿಗಳಿರಾ,
ತೊರೆಯಿಂ ಬೋ ತೊರೆಯಿಂ ಬೋ;
ಪರನಾರಿಯರ ಸಂಗವ ತೊರೆಯಿಂ ಬೋ!
ಪರಧನದಾಮಿಷವ ತೊರೆಯಿಂ ಬೋ!
ಇವ ತೊರೆಯದೆ ಹೋಗಿ ತೊರೆಯ ಮಿಂದಡೆ
ಬರುದೊರೆ ಹೋಹುದು, ಲಿಂಗದೇವಾ.

-ಬ.ವ.ದೀ. 641

ಭಾರತೀಯ (ಹಿಂದುಗಳಲ್ಲಿ)ರಲ್ಲಿ ಒಂದು ಭ್ರಮಾತ್ಮಕ ಕಲ್ಪನೆ ಇದೆ. ಅದೆಂದರೆ, ಕೆಲವು ತೀರ್ಥಕ್ಷೇತ್ರಗಳು ಪವಿತ್ರ. ಅಲ್ಲಿರುವ ನದಿ, ಕೊಳಗಳಲ್ಲಿ ಮಿಂದರೆ ಹಿಂದೆ ಮಾಡಿದ ಪಾಪಗಳು ನಿವಾರಣೆಯಾಗಿ ಪುಣ್ಯ ಪ್ರಾಪ್ತಿಯಾಗುವುದು. ವಿಶಿಷ್ಟ ಮುಹೂರ್ತಗಳಲ್ಲಿ ಮಿಂದರಂತೂ ಇನ್ನೂ ಹೆಚ್ಚಿನ ಪುಣ್ಯ ಬರುವುದು ಎಂಬುದು. ಹೀಗಾಗಿ ಕೆಲವು ದಿನಗಳಂದು ಪುಣ್ಯಕ್ಷೇತ್ರದ ನೀರಿನಲ್ಲಿ ಮುಳುಗಲು ನೂಕುನುಗ್ಗಲು. ಹರಿವ ತೊರೆಯಲ್ಲಿ ಮಿಂದರೆ ಪುಣ್ಯ ಪ್ರಾಪ್ತಿ ಎಂದು ಮೀಯಲು ಬಂದ ಅಣ್ಣಗಳಿರಾ (ಗೃಹಸ್ಥರೆ) ಮತ್ತು ಸ್ವಾಮಿಗಳಿರಾ (ವಿರಕ್ತರೆ) ಮೊದಲು ಪರಸತಿಯ ಸಂಗವನ್ನು ತೊರೆಯಿರಿ, ಅನ್ಯರ ಹಣವನ್ನು ಲಪಟಾಯಿಸಬೇಕೆನ್ನುವ ಪರಧನದ ಆಮಿಷವನ್ನು ತೊರೆಯಿರಿ. ಇವನ್ನು ಬಿಡದೆ ಕೇವಲ ತೊರೆಯಲ್ಲಿ ಮಿಂದರೆ ನಿಮ್ಮ ಸಮಯ ಮತ್ತು ಹಣ ಎರಡೂ ವ್ಯರ್ಥ.

643. ನೀರು ಪಾಪವನ್ನು ತೊಳೆಯದು

ಸತ್ಯಶೌಚ ನಿತ್ಯನೇಮವ ತಪ್ಪದೆ ಮಾಡಬಲ್ಲಡೆ ಅದು ಲೇಸು.
ಮತ್ಸ್ಯ ಕೂರ್ಮ ಮಂಡೂಕ ಜಲದೊಳಗಿರ್ದಲ್ಲಿ ಫಲವೇನು ?
ಅಗಡವ ಮಾಡಿ ಮಾಗುಡವ ಮಿಂದಡೆ
ತಾ ಕೊಡಬಲ್ಲನೇ ಲಿಂಗದೇವ ?

-ಬ.ವ.ದೀ. 642

ಪ್ರಾಮಾಣಿಕತೆ, ಶುಚಿತ್ವ, ನಿತ್ಯ ನೇಮಗಳನ್ನು ತಪ್ಪದೆ ಮಾಡುವ ನಿಷ್ಠೆ ಬಹಳ ಮುಖ್ಯ.ಕೇವಲ ನೀರಿನಲ್ಲಿ ಸ್ನಾನ ಮಾಡಿದ ಮಾತ್ರಕ್ಕೆ ವ್ಯಕ್ತಿ ಶುದ್ಧನಾಗನು. ಶುಚಿಯು ಬೇರೆ ಶುದ್ಧಿ ಬೇರೆ. ಸ್ವಚ್ಛತೆ ಶರೀರಕ್ಕೆ ಸಂಬಂಧಿಸಿದೆ. ಶುದ್ಧಿಯು ಮನಸ್ಸಿಗೆ ಸಂಬಂಧಿಸಿದೆ. ನೀರು ಶರೀರವನ್ನು ಸ್ವಚ್ಛಮಾಡಬಲ್ಲುದೇ ವಿನಾ ಶುದ್ಧಿ ಮಾಡದು. ತೀರ್ಥಕ್ಷೇತ್ರದ ನೀರು ಕೊಳಕಾಗಿದ್ದರೆ ದೇಹ ಸ್ವಚ್ಛವಾಗುವುದಿರಲಿ ಇನ್ನಷ್ಟು ರೋಗಗಳು ಬರುತ್ತವೆ. ನೀರಿನಲ್ಲಿ ಮುಳುಗಿದ ಮಾತ್ರಕ್ಕೆ ಅಥವಾ ಸ್ನಾನ ಮಾಡಿದ ಮಾತ್ರಕ್ಕೆ ತಾನು ಪವಿತ್ರನಾದೆನೆಂದು ಭಾವಿಸಬಾರದು. ಮನುಷ್ಯ ಎಂದೋ ಒಂದು ದಿನ ತೀರ್ಥಕ್ಷೇತ್ರ ಸ್ನಾನ ಮಾಡಿದರೆ, ದಿನಕ್ಕೊಮ್ಮೆ ಸ್ನಾನ ಮಾಡಿದರೆ ಇವನಿಗಿಂತಲೂ ಸದಾ ನೀರಿನಲ್ಲೇ ಇರುವ ಮೀನು, ಆಮೆ ಮತ್ತು ಕಪ್ಪೆಗಳು ಶ್ರೇಷ್ಠವಾಗುತ್ತವಲ್ಲವೆ? ಅಗಡ ಎಂದರೆ ಮಾಡಬಾರದ ಪಾಪವನ್ನು ಮಾಡಿ ಮಾಗುಡ ಅಂದರೆ ದೊಡ್ಡತೊರೆ (ಮಹಾ ಕೂಟದ ಕೊಳ) ಯಲ್ಲಿ ಮಿಂದರೆ ಲಿಂಗದೇವನ ಅನುಗ್ರಹವಾಗಲು ಸಾಧ್ಯವಾದೀತೆ?

644. ಕಳ್ಳಾಟದವರ ಪೂಜೆ ಸಲ್ಲದು

ಕುಳ್ಳಿರ್ದಲ್ಲಿ ಲಿಂಗವ ಪೂಜಿಸಿ ಅಲ್ಲದಾಟವನಾಡುವರಯ್ಯಾ;
ಬೆಳ್ಳೆತ್ತಿನ ಮರೆಯಲಿರ್ದು ಹುಲ್ಲೆಗಂಬ ತೊಡುವಂತೆ !
ಕಳ್ಳ ಹಾದರಿಗರ ಕೈಯಲು ಪೂಜೆಯ ಕೊಳ್ಳ
ನಮ್ಮ ಲಿಂಗದೇವ.

-ಬ.ವ.ದೀ. 643

ತಾವು ಬಹಳ ದೊಡ್ಡ ತಪಸ್ವಿಗಳೆಂಬಂತೆ ಸೋಗು ಹಾಕಿ ಆಡಂಬರದ ಪರಿಕರಗಳನ್ನು ಇಟ್ಟುಕೊಂಡು ಪೂಜೆ ಮಾಡುತ್ತ ತೆರೆಯ ಹಿಂದೆ ಮಾಡಬಾರದ ಕೆಲಸಗಳನ್ನು ಅನೇಕ (ಸ್ವಾಮಿಗಳು, ಮಠಾಧೀಶ)ರು ಮಾಡುತ್ತಾರೆ. ಹೊನ್ನು ಹೆಣ್ಣು ಮಣ್ಣುಗಳು ಸನ್ಯಾಸಿಯಾದರೆ ವಿಪುಲವಾಗಿ ಸಿಗುವವು ಎಂದು ಸನ್ಯಾಸ ಜೀವನಕ್ಕೆ ಬರುವ ಡಾಂಭಿಕರೂ ಇರುತ್ತಾರೆ. ಇಂಥವರು ಆಡುವ ಅಲ್ಲದಾಟ ಸನ್ಯಾಸಿ ಜೀವನಕ್ಕೆ ಕಲಂಕ ತರುವಂಥದ್ದು. ಜಿಂಕೆಯನ್ನು ಕೊಲ್ಲಬೇಕು ಎನ್ನುವವರು ಒಂದು ಬಿಳಿಯ ಎತ್ತನ್ನು ಕಟ್ಟಿ ಹಾಕುವರು. ಅದು ತನ್ನಂತೆಯೇ ಸಾಧು ಪ್ರಾಣಿ ಎಂದು ನಂಬಿ ಜಿಂಕೆಯು ಹುಲ್ಲು ಮೇಯುತ್ತ ಬರುವುದು. ಆಗ ಬೇಟೆಗಾರರು ಬಾಣ ಬಿಡುವರು. ಅದೇ ರೀತಿ ವೈರಾಗ್ಯದ ತಪಸ್ವಿಯ ವೇಷ ಹಾಕಿ ಕುಳಿತು ಹೆಣ್ಣು, ಹೊನ್ನು, ಮಣ್ಣಿಗೆ ಆಶಿಸುವರು. ಜೇಡರ ದಾಸಿಮಯ್ಯನ ಒಂದು ವಚನ ಇದಕ್ಕೆ ಹೋಲಿಕೆಯಾಗುವಂತಿದೆ.

ಬರು ಶಠಗನ ಭಕ್ತಿ ದಿಟವೆಂದು ನಂಬಬೇಡ

ಮಠದೊಳಗಣ ಬೆಕ್ಕು ಇಲಿಯ ಕಂಡು
ಪುಟ ನೆಗೆದಂತಾಯಿತ್ತು ಕಾಣಾ ರಾಮನಾಥ ॥

ಇಂಥ ಮೋಸಗಾರರ ಕೈಗೆ ಸಿಕ್ಕಿ ಎಷ್ಟೋ ಹೆಣ್ಣು ಮಕ್ಕಳು ಶೀಲವನ್ನು ಕಳೆದುಕೊಳ್ಳುವರು; ಶ್ರೀಮಂತರು ಹಣವನ್ನು ಕಳೆದುಕೊಳ್ಳುವರು. ಈ ರೀತಿಯ ಕಳ್ಳ ಹಾದರಿಗರ ಸೋಗು ಹಾಕಿದ ಪೂಜಕರಿಂದ ಲಿಂಗದೇವನು ಪೂಜೆಯನ್ನು ಕೈಗೊಳ್ಳನು.

645. ಬಡವನ ಕೋಪ ಅವುಡಿಗೆ ಮೃತ್ಯು

ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದಡೆ
ಹಿಡಿದಿರ್ದ ಲಿಂಗವು ಘಟಸರ್ಪವಯ್ಯಾ,
ನುಡಿಯಲು ಬಾರದು ನಡೆಯಲು ಬಾರದು.
ಲಿಂಗದೇವನೆ ದಿವ್ಯವೊ ಅಯ್ಯಾ;
ಬಡವನ ಕೋಪ ಅವುಡಿಗೆ ಮೃತ್ಯುವಾದಂತೆ
ಕಡೆದಾಂಟದು ಕಾಣಾ, ಲಿಂಗದೇವಾ.

-ಬ.ವ.ದೀ. 644

ಮಾತಿನಲ್ಲಿ ಆದರ್ಶದ ನುಡಿಗಳನ್ನಾಡಿ ನಡೆಯುವಲ್ಲಿ, ಆಚರಿಸುವಲ್ಲಿ ತಪ್ಪಿದಡೆ ಆಗ ಕೈಯಲ್ಲಿ ಹಿಡಿದು ಪೂಜಿಸುವ ಇಷ್ಟಲಿಂಗವೇ ಘಟಸರ್ಪವಾಗಿ ಕಚ್ಚುವುದು. ನುಡಿಯುವಾಗ ಎಚ್ಚರಿಕೆಯಿಂದ ನುಡಿಯಬೇಕು; ನಡೆಯುವಾಗ ಎಚ್ಚರಿಕೆಯಿಂದ ನಡೆಯಬೇಕು. ಲಿಂಗದೇವನ ದಿವ್ಯ ಸಾಕ್ಷಿಯನ್ನು ಇಟ್ಟುಕೊಂಡು ನುಡಿಯಬೇಕು, ನಡೆಯಬೇಕು. ಬಡವನು ಶ್ರೀಮಂತನ ಮೇಲೆ ಕೋಪ ಮಾಡಿಕೊಂಡು ಅವುಡನ್ನು ಕಚ್ಚಿಕೊಂಡರೆ ಅವನ ದವಡೆ ನೋವು ಬರುತ್ತದೆಯೇ ವಿನಾ ಶ್ರೀಮಂತನಿಗೆ ಏನೂ ಆಗದು. ಹಾಗೆ ನಡೆ-ನುಡಿಗಳಲ್ಲಿ ಸಾಮರಸ್ಯವಿಲ್ಲದ ವರ್ತನೆ ದಂಡೆಯನ್ನು ಸೇರುವುದಿಲ್ಲ, ಅಂಗೈಯಲ್ಲಿರುವ ಲಿಂಗದೇವನಿಗೆ ಏನೂ ಆಗದು, ಪಾಪ ಎರಗುವುದು ಭಕ್ತನ ಮೇಲೆಯೆ!

646. ಹೇಂಗೆ ಮನ ಹಾಂಗೆ ಘನ

ತನು ಶುಚಿಯಿಲ್ಲದವನ ದೇಹಾರವೇಕೆ?
ದೇವರು ಕೊಡನೆಂಬ ಭ್ರಾಂತದೇಕೆ?
ಮನಕ್ಕೆ ಮನವೇ ಸಾಕ್ಷಿ, ಸಾಲದೆ ಲಿಂಗ ತಂದೆ
ಹೇಂಗೆ ಮನ ಹಾಂಗೆ ನಿಮ್ಮ ಘನ, ತಪ್ಪದು ಲಿಂಗದೇವಾ.

-ಬ.ವ.ದೀ. 645

ಶಾರೀರಿಕ ಸ್ವಚ್ಛತೆ ಬಹಳ ಮುಖ್ಯ. ದಿನ ನಿತ್ಯ ಮಲಮೂತ್ರ ವಿಸರ್ಜನೆ ಮಾಡಿದ ಮೇಲೆ ಕೈಗಳನ್ನು ಸರಿಯಾಗಿ ಸೋಪು ಹಚ್ಚಿ ತೊಳೆದುಕೊಳ್ಳಬೇಕು.ಬಾಯಿಯನ್ನು, ಹಲ್ಲುಗಳನ್ನು ಉಜ್ಜಿ ಸರಿಯಾಗಿ ತೊಳೆದುಕೊಳ್ಳಬೇಕು. ಬಟ್ಟೆಗಳನ್ನು ಶುಭ್ರವಾಗಿಟ್ಟುಕೊಳ್ಳಬೇಕು. ಸರ್ವಾಂಗವೂ ಶುಚಿಯಾಗುವ ರೀತಿಯಲ್ಲಿ ಸ್ನಾನ ಮಾಡಬೇಕು.

ಇಂಥ ಶಾರೀರಿಕ ಶುಚಿತ್ವ ಇಲ್ಲದವರ ಶರೀರದಿಂದ ದುರ್ಗಂಧ ಬರುವ ಕಾರಣ ಅವರ

ಒಡನಾಟ ಕಷ್ಟಸಹ್ಯವಾಗುತ್ತದೆ. ಮಾನವ ಸ್ವಭಾವತಃ ದುರ್ಬಲ ಮನಸ್ಸಿನವನು. ಅದಕ್ಕೆ ತಕ್ಕಂತೆ ಈ ದೇಶದಲ್ಲಿ ಮೂಢನಂಬಿಕೆ ಬೆಳೆಸಲಾಗುತ್ತದೆ. ವಿಘ್ನೇಶನು ವಿಘ್ನ ನಿವಾರಣೆ ಮಾಡುತ್ತಾನೆ, ಲಕ್ಷ್ಮಿ ಸಂಪತ್ತು ಕೊಡುತ್ತಾಳೆ, ನವಗ್ರಹಗಳು ಕೋಪಗೊಳ್ಳಬಾರದು - ಹೀಗೆ ಒಂದೊಂದು ಕೆಲಸ ಮಾಡಲು ಒಂದೊಂದು ದೇವತೆ! ಸೃಷ್ಟಿಕರ್ತ ಪರಮಾತ್ಮ ಸರ್ವಜ್ಞ, ಸರ್ವಶಕ್ತ; - ಅವನ ಅಧೀನದಲ್ಲಿ ಎಲ್ಲವೂ ನಡೆಯುತ್ತಿವೆ. ದೇವರು ನಾವು ಬೇಡಿದ್ದನ್ನು ಕೊಡಬಲ್ಲ ಎಂಬ ನಂಬಿಕೆಯನ್ನು ದೃಢಪಡಿಸಿಕೊಳ್ಳದೆ ಹಲವು ದೇವತೆಗಳನ್ನು ಬೇಡುವ ದೌರ್ಬಲ್ಯ ಮಾನವರದ್ದು. ಈ ನಂಬಿಕೆಗೆ ನಮ್ಮ ಮನಸ್ಸೇ ಸಾಕ್ಷಿ, ಅದನ್ನು ಗಟ್ಟಿಗೊಳಿಸಬೇಕು. ಲಿಂಗದೇವನೇ, ನಮ್ಮ ಮನಸ್ಸು ಹೇಗೆ ಇರುತ್ತದೋ ಹಾಗೆ ನಿಮ್ಮ ಘನ ಕೃಪೆಯು ನಮಗೆ ಒದಗುತ್ತದೆ.

647. ಅನ್ಯಾಯವನ್ನು ಲಿಂಗದೇವ ಸಹಿಸ

ನಿಚ್ಚನಿಚ್ಚ ಪೂಜಿಸುವಂಗೆ - ಇದಕ್ಕಿದೆ ದೃಷ್ಟಿದೀವಿಗೆ -
ಪಾದೋದಕ ಕೋಶಪಾನವಲ್ಲದೆ ಏನೂ ಇಲ್ಲವಯ್ಯಾ.
ಮಜ್ಜನಕ್ಕೆರೆವುದು ಲಿಂಗ-
ಅದು ಕರಸ್ಥಲದ ದಿಬ್ಯ-
ಗುರುವಚನ ಭಾಷಾಪತ್ರ ಶಿವಕರದಲ್ಲಿ!
ಲಿಂಗದೇವ.

-ಬ.ವ.ದೀ. 646

ಇಷ್ಟಲಿಂಗ ಪೂಜೆ ನಿತ್ಯ ನೇಮ. ಇಷ್ಟಲಿಂಗದ ಮಹತ್ವ ಏನು ಹೇಳಲಿ? ಕತ್ತಲೆಯಲ್ಲಿ ನಡೆಯುವವನಿಗೆ ದೀವಟಿಗೆ, ಪಂಜು ಮುಂತಾದ ಕೈದೀವಿಗೆಯಿದ್ದಂತೆ ದೇವರ ಪಥದಲ್ಲಿ ಸಾಗುವವನಿಗೆ ದೃಷ್ಟಿ ದೀವಿಗೆ. ಇದರ ಪರಿಣಾಮ ಪಾದೋದಕ ಪ್ರಾಪ್ತಿ. ನಾವು ಮಜ್ಜನಕ್ಕೆರೆವ ಲಿಂಗ ಕರಸ್ಥಲದ ದಿವ್ಯ ವಸ್ತು ಇದನ್ನು ಹಿಡಿದ ಕರ ಶಿವಕರ ಇಷ್ಟಲಿಂಗವು ಗುರುವು ನಮಗೆ ಬೋಧಿಸಿದ ಒಡಂಬಡಿಕೆಯ ಪತ್ರ. ಇದು ವಿಶ್ವಕುಟುಂಬತ್ವದ ಸಾಧನ. ಗುರುಗಳ ಎದುರು ಇಷ್ಟಲಿಂಗ ಹಿಡಿದು ಭಕ್ತ ಕೈಗೊಳ್ಳುವ ಪ್ರತಿಜ್ಞೆ ಏನೆಂದರೆ, "ಲಿಂಗದೇವಾ, ನೀನು ಜಗತಿನ ಕರ್ತ, ತಂದೆ. ಜೀವರಾಶಿಗಳೆಲ್ಲ ನಿಮ್ಮ ಮಕ್ಕಳು. ಆದ್ದರಿಂದ ನಾನು ಸಕಲ ಜೀವರ ಲೇಸನ್ನು ಬಯಸುತ್ತೇನೆ." ಈ ರೀತಿ ಪ್ರತಿಜ್ಞೆ ಮಾಡಿದ ಸಾಧಕನು ಸತ್ಯದಿಂದ ನಡೆದರೆ ದೇವನು ನಿತ್ಯನೇಮದಂತೆ ಒಳ್ಳಿತನ್ನು ನೀಡುವನು. ತಪ್ಪಿ ನಡೆದು, ಸುಳ್ಳು ಹೇಳುವಂಗೆ ಮಡಿಲಲ್ಲಿ ಕಟ್ಟಿಕೊಂಡ ಕಿಚ್ಚಾಗಿ ಸುಡುತ್ತಾನೆ. ಇಷ್ಟಲಿಂಗವನ್ನು ಪೂಜಿಸಿ ಒಡಂಬಡಿಕೆಯನ್ನು ಮರೆತು ಪುನಃ ಅನ್ಯಾಯದ ದಾರಿಯಲ್ಲಿ ನಡೆದರೆ ಲಿಂಗದೇವನು ಅಂಥ ಭಕ್ತನನ್ನು ಶಿಕ್ಷಿಸುವನು.

648. ಡಂಭಕರ ಭಕ್ತಿಗೆ ದೇವನೊಲಿಯನು

ಪಾಪಿಗೆ ಕೋಪಿಗೆ ಭಕ್ತಿಯಾಗೆಂದಡಪ್ಪುದೆ?
ನಾರಿವಾಣವಕ್ಕುದೆ ನಾಯಿಗೆ? ಲಿಂಗದೇವಾ,
ನಿಮ್ಮ ನಂಬಿಯೂ ನಂಬದ ಡಂಭಕರಿಗೆ ಭಕ್ತಿಯಪ್ಪುದೆ?

-ಬ.ವ.ದೀ. 647

ಪಾಪ ಮಾಡುವವನು ಮತ್ತು ಕೋಪಿಷ್ಟನಿಗೆ ಭಕ್ತಿಯು ಅಳವಡದು. ನಾಯಿಗೆ ಸವಿಯಾದ

ತೆಂಗಿನ ಕಾಯಿ ರುಚಿಸಲು ಸಾಧ್ಯವೆ? ಅದಕ್ಕೇನಿದ್ದರೂ ಮಾಂಸ, ಮೂಳೆಗಳೇ ಸವಿಯಾಗುವುದು. ದೇವರನ್ನು ನಂಬಿದಂತೆ ಕಾಣುವರು. ನಿಜವಾಗಿಯೂ ನಂಬಿರುವುದಿಲ್ಲ. ಇಂಥ ಡಂಭಕರಿಗೆ ಭಕ್ತಿಯು ಅಳವಡುವುದಿಲ್ಲ. ಪಾಪಿಯ ಮನಸ್ಸು ಸದಾ ಕೆಟ್ಟ ಕೆಲಸಗಳ ಚಿಂತನೆಯಲ್ಲಿಯೇ ತೊಡಗಿರುವುದರಿಂದ ದೇವನನ್ನು ನೆನಯಲು ಎಂತು ಸಾಧ್ಯ? ಕೋಪಿಷ್ಟನ ಮನಸ್ಸು ಸದಾ ಉದ್ರೇಕಗೊಂಡು ಬಹಿರ್ಮುಖವಾಗಿರುತ್ತದೆ. ಅಲ್ಲಿಯೂ ಸಚ್ಚಿಂತನೆ ಒಳಸೇರದು. ಹೀಗಾಗಿ ಪಾಪಿ, ಕೋಪಿಗಳಿಗೆ ಭಕ್ತಿಯು ಅಳವಡದು.

649. ಕೂಪವರಿಗೇ ದೇವರ ಒಲುಮೆ

ಕೋಪಿ ಮಜ್ಜನಕ್ಕೆರೆದಡೆ ರಕ್ತದ ಧಾರೆ!
ಪಾಪಿ ಹೂವನೇರಿಸಲು ಮಸೆದಾಯುಧದ ಗಾಯ!
ಕೂಪವರನಾರನೂ ಕಾಣೆನು ಮಾದಾರ ಚನ್ನಯ್ಯನಲ್ಲದೆ
ಕೂಪವರನಾರನೂ ಕಾಣೆನು ಡೋಹರ ಕಕ್ಕಯ್ಯನಲ್ಲದೆ,
ಆಪತ್ತಿಯುಳ್ಳವ ನಮ್ಮ ಮಡಿವಾಳ ಮಾಚಯ್ಯಾ,
ನಿನ್ನಾಪತ್ತಿಗರಿವರಯ್ಯಾ, ಲಿಂಗದೇವಯ್ಯಾ.

-ಬ.ವ.ದೀ. 648

ಕೋಪದಿಂದ ಕುದಿಯುತ್ತ ಇಷ್ಟಲಿಂಗಕ್ಕೆ ಮಜ್ಜನಕ್ಕೆರೆದರೆ ಅದು ರಕ್ತದ ಧಾರೆ. (ಕೋಪವು ಉದ್ರೇಕಗೊಂಡಾಗ ದೇಹದಲ್ಲಿ ಕೆಂಪು ಕಣಗಳು ಉದ್ರೇಕಗೊಂಡು ಶರೀರದ ಸುತ್ತ ಕೆಂಪು ಪ್ರಭಾವಳಿಯನ್ನು ಉಂಟು ಮಾಡುತ್ತವಂತೆ. ಮಜ್ಜನಕ್ಕೆರೆದಾಗ ಆ ಕೆಂಪು ಕಣಗಳು ಮಿಶ್ರಣಗೊಂಡು ರಕ್ತದ ಧಾರೆ ಆಗುವುದರಲ್ಲಿ ಆಶ್ಚರ್ಯವೇನಿದೆ?) ಪಾಪಗಳನ್ನು ನಿರಂತರವಾಗಿ ಮಾಡುತ್ತ ಇಷ್ಟಲಿಂಗ ದೇವನಿಗೆಮಲ್ಲಿಗೆ ಹೂವನ್ನು ಏರಿಸಿದರೂ ಅದು ಮಸೆದ ಆಯುಧದಿಂದ ಹೊಡೆದಂತೆ ಆಗುತ್ತದಂತೆ. ನಿಜವಾಗಿಯೂ ದೇವರನ್ನು ಪ್ರೀತಿ ಮಾಡಿದವರೆಂದರೆ ಮಾದಾರ ಚನ್ನಯ್ಯ ಡೋಹರ ಕಕ್ಕಯ್ಯ. ದೇವರನ್ನು ಆಪ್ತವಾಗಿ ಪ್ರೀತಿಸಿದ ಮತ್ತೊಬ್ಬ ಶರಣ ಮಡಿವಾಳ ಮಾಚಯ್ಯ ಉಳಿದ ಬಹುಪಾಲು ಜನರು ಆಪತ್ತು ಬಂದಾಗ ದೇವರನ್ನು ನೆನೆಯುವವರು, ಸಂಕಟ ಪರಿಹರಿಸು ಎಂದು ಬೇಡುವ ಆರ್ತರು. ಏನಾದರೂ ಲಾಭವಾಗಬೇಕು ಎಂಬ ಅರ್ಥಾರ್ಥಿಗಳು. ನಿಜ ಶರಣರು ದೇವರು ಕೊಡುವ ವಸ್ತುಗಳಿಗಾಗಿ ದೇವರನ್ನು ಆರಾಧಿಸದೆ ದೇವರಿಗಾಗಿ ದೇವರನ್ನು ಆರಾಧಿಸುವರು, ಪ್ರೀತಿಸುವರು. ಲಿಂಗದೇವನೂ ಸಹ ಅಂಥ ಭಕ್ತರನ್ನು ಅಷ್ಟೇ ಪ್ರೀತಿಸುವನು.

(ಮುಂದುವರಿಯುವುದು......)

ಕಲ್ಯಾಣ ಕಿರಣ ಓದುಗರಿಗೆ ಸೂಚನೆ

ವಿಳಾಸ ಬದಲಾವಣೆ, ತಿದ್ದುಪಡಿ ಮುಂತಾಗಿ ಏನಾದರೂ ಕಾರ್ಯಾಲಯಕ್ಕೆ ತಿಳಿಸಬೇಕಾಗಿದ್ದರೆ ನೀವು ಬೆಂಗಳೂರಿನ ಬಸವ ಮಂಟಪದ ವಿಳಾಸಕ್ಕೆ ಬರೆಯಬೇಕು. ಅಂಚೆಗೆ ಹಾಕಲು ನಮಗೆ ದಿನಾಂಕಗಳಿಗೆ ಅನುಮತಿ ಇದೆ. ಹಾಗೆ ಪತ್ರ ವ್ಯವಹಾರ ಮಾಡುವಾಗ ಮರೆಯದೆ ಕ್ರಮಸಂಖ್ಯೆ ನಮೂದಿಸೇಕು. ಇಲ್ಲವಾದರೆ ಹುಡುಕಿ ವಿಳಾಸ ಬರೆಯಲು/ ಬದಲಾಯಿಸಲು ಸಾಧ್ಯವಿಲ್ಲ/ ಕ್ರಮಸಂಖ್ಯೆಯು ಪತ್ರಿಕೆಯ ಹೊರಭಾಗದಲ್ಲಿ ಇರುವ ರ್‍ಯಾಪರ್ ಮೇಲೆ ಇರುತ್ತವೆ.

****

ಓಂ ಶ್ರೀ ಗುರು ಬಸವ ಲಿಂಗಾಯ ನಮಃ

866666

ಧರ್ಮಕ್ಷೇತ್ರ ಕೂಡಲಸಂಗಮದಲ್ಲಿ
2012 ರ ಜನವರಿ 11, 12, 13, 14, 15ರಂದು ನಡೆಯಲಿರುವ
ಇಪ್ಪತ್ತೈದನೆಯ ಶರಣಮೇಳದ ಅಂಗವಾಗಿ
ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಅವರ
ಪ್ರಚಾರ ಪ್ರವಾಸ ಕಾರ್ಯಕ್ರಮ

ಆತ್ಮೀಯ ಶರಣ ಬಂಧುಗಳಿಗೆ, ಬಸವ ಸ್ಮರಣಪೂರ್ವಕ ಶುಭ ಹಾರೈಕೆಗಳು.

ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ ಬಸವಣ್ಣನವರ ಕೃಪೆಯಿಂದ ನಾವಿತ್ತ ಕ್ಷೇಮ. ನಿಮ್ಮ ಕ್ಷೇಮ ಹಾರೈಸುತ್ತೇವೆ. ಶರಣ ಬಂಧುಗಳ ಹಿಗ್ಗಿನ ಉತ್ಸವ, 2012ನೆಯ ಇಸವಿಯ ದಿ.11ರಿಂದ 15ರವರೆಗೆ ನಡೆಯುವ ಬೆಳ್ಳಿ ಮಹೋತ್ಸವ- 25ನೆಯ ಶರಣ ಮೇಳದ ಪ್ರಚಾರಾರ್ಥ ಮತ್ತು ಸಂಘಟನೆ, ಸಂದರ್ಶನದ ದೃಷ್ಟಿಯಿಂದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈಗ ತಮ್ಮ ಊರಿಗೆ ಅವರು ಆಗಮಿಸುವ ದಿನಾಂಕದ ವೇಳಾ ಪಟ್ಟಿಯನ್ನು ಕಳಿಸಲಾಗಿದೆ. ಈ ದಿನಾಂಕಕ್ಕೆ ಕಾರ್ಯಕ್ರಮ ಏರ್ಪಡಿಸುವ ಬಗ್ಗೆ ತಮ್ಮ ಸಾಧ್ಯಾ ಸಾಧ್ಯತೆಯನ್ನು ಬೇಗನೆ ನಮಗೆ ದೂರವಾಣಿಯ ಮೂಲಕ ಅಥವಾ ಪತ್ರ ಮುಖೇನ ತಿಳಿಸಬೇಕು. ಬೆಂಗಳೂರು ವಿಳಾಸಕ್ಕೆ ವ್ಯವಹರಿಸಬೇಕು. ಕಾರಣಾಂತರದಿಂದ ನಿಮಗೆ ಕಾರ್ಯಕ್ರಮ ಏರ್ಪಡಿಸಲು ಆಗದೆ ಇದ್ದರೆ ಅಥವಾ ಇನ್ನೂ ಹೆಚ್ಚುವರಿ ದಿನಾಂಕಗಳು ಬೇಕಾಗಿದ್ದರೆ ತಕ್ಷಣ ತಿಳಿಸಿರಿ.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಸಂದರ್ಶಿಸಲಿರುವ ಈ ಸಮಯವನ್ನು ಸಂಘಟನೆಗಾಗಿ ಬಳಸಿಕೊಳ್ಳುವುದೇ ಅಲ್ಲದೆ ದೀಕ್ಷಾ ಕಾರ್ಯಕ್ರಮಗಳನ್ನು ಏರ್ಪಡಿಸಲೂಬಹುದು. 2012 ನೆಯ ಇಸವಿಯ 25ನೆಯ ಶರಣ ಮೇಳದ ಸರ್ವತೋಮುಖ ಯಶಸ್ಸಿಗೆ ತಾವು ಸಹಕರಿಸುವಿರಾಗಿ ನಂಬಿದ್ದೇವೆ.

ವಾಸ್ತವ್ಯ : ಬೆಂಗಳೂರು
03-10-2011

ಪೂಜ್ಯ ಶ್ರೀಮನ್ ನಿರಂಜನ
ಮಹಾ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ

ವಿ.ಸೂ : ಕಾರಣಾಂತರದಿಂದ ದಿನಾಂಕಗಳಲ್ಲಿ ಊರುಗಳಲ್ಲಿ ಬದಲಾವಣೆ ಆಗಬಹುದು. ಅದನ್ನು ತಿಳಿಸಲಾಗುವುದು.

****

ಕ್ರ.ಸಂ.	ದಿನಾಂಕ	ವಾರ	ಊರಿನ ಹೆಸರು
1.	01-11-2011	ಬಸವ (ಮಂಗಳ)ವಾರ	ವಿಜಯಪುರ
2.	02-11-2011	ಚೆನ್ನ(ಬುಧ)ವಾರ	ಹೊಸಕೋಟೆ
3.	03-11-2011	ಪ್ರಭು(ಗುರು)ವಾರ	ಸುತ್ತಮುತ್ತ
4.	04-11-2011	ಮಾತೃ(ಶುಕ್ರ)ವಾರ	ಸುತ್ತಮುತ್ತ
5.	05-11-2011	ಶರಣ(ಶನಿ)ವಾರ	ಚಿಕ್ಕಮಗಳೂರು
6.	06-11-2011	ದೇವ (ಶನಿ)ವಾರ	ಚಿಕ್ಕಮಗಳೂರು
7.	07-11-2011	ಶಿವ (ಸೋಮ)ವಾರ	ಚಿಕ್ಕಮಗಳೂರು
8.	08-11-2011	ಬಸವ (ಮಂಗಳ)ವಾರ	”
9.	09-11-2011	ಚೆನ್ನ(ಬುಧ)ವಾರ	”
10.	10-11-2011	ಪ್ರಭು (ಗುರು)ವಾರ	ಭದ್ರಾವತಿ
11.	11-11-2011	ಮಾತೃ (ಶುಕ್ರ)ವಾರ	,,
12.	12-11-2011	ಶರಣ (ಶನಿ)ವಾರ	ಶಿವಮೊಗ್ಗ
13.	13-11-2011	ದೇವ(ಭಾನು)ವಾರ	ಕೊಮ್ಮನಾಳ
14.	14-11-2011	ಶಿವ(ಸೋಮ)ವಾರ	ದಾವಣಗೆರೆ
15.	15-11-2011	ಬಸವ(ಮಂಗಳ)ವಾರ	ಚಿತ್ರದುರ್ಗ
16.	16-11-2011	ಚನ್ನ(ಬುಧ)ವಾರ	ಚಳ್ಳಕೆರೆ
17.	17-11-2011	ಪ್ರಭು(ಗುರು)ವಾರ	ದೊಡ್ಡಉಳ್ಳಾರ್ತಿ
18.	18-11-2011	ಮಾತೃ (ಶುಕ್ರ)ವಾರ	ಚಿತ್ರನಾಯಕನ ಹಳ್ಳಿ
19.	19-11-2011	ಶರಣ (ಶನಿ)ವಾರ	ಬಳ್ಳಾರಿ
20.	20-11-2011	ದೇವ (ಭಾನು)ವಾರ	,,
21.	21-11-2011	ಶಿವ (ಸೋಮ)ವಾರ	ಕೋಡಲ್
22.	22-11-2011	ಬಸವ (ಮಂಗಳ)ವಾರ	ನಾಗಲಾಪುರ
23.	23-11-2011	ಚನ್ನ(ಬುಧ)ವಾರ	ಶಿರುಗುಪ್ಪ
24.	24-11-2011	ಪ್ರಭು(ಗುರು)ವಾರ	ರಾಯಚೂರು
25.	25-11-2011	ಮಾತೃ(ಶುಕ್ರ)ವಾರ	ಶಕ್ತಿನಗರ
26.	26-11-2011	ಶರಣ(ಶನಿ)ವಾರ	ಗಂಗಾಪತಿ
27.	27-11-2011	ದೇವ(ಭಾನು)ವಾರ	ಕೊಪ್ಪಳ
28.	28-11-2011	ಶಿವ (ಸೋಮ)ವಾರ	,,

****

29.	29-11-2011	ಬಸವ(ಮಂಗಳ)ವಾರ	”
30.	30-11-2011	ಚನ್ನ(ಬುಧ)ವಾರ	ಹುಬ್ಬಳ್ಳಿ
31.	01-12-2011	ಪ್ರಭು(ಗುರು)ವಾರ	ಧಾರವಾಡ
32.	02-12-2011	ಮಾತೃ(ಶುಕ್ರ)ವಾರ	ಮುಮ್ಮಿಗಟ್ಟೆ
33.	03-12-2011	ಶರಣ(ಶನಿ)ವಾರ	ಅವರಾದಿ
34.	04-12-2011	ದೇವ(ಭಾನು)ವಾರ	”
35.	05-12-2011	ಶಿವ(ಸೋಮ)ವಾರ	”
36.	06-12-2011	ಬಸವ(ಮಂಗಳ)ವಾರ	ಬೈಲಹೊಂಗಲ
37.	07-12-2011	ಚನ್ನ(ಬುಧ)ವಾರ	”
38.	08-12-2011	ಪ್ರಭು(ಗುರು)ವಾರ	ಬೆಳಗಾವಿ
39.	09-12-2011	ಮಾತೃ(ಶುಕ್ರ)ವಾರ	”
40.	10-12-2011	ಶರಣ(ಶನಿ)ವಾರ	ಸಂಕೇಶ್ವರ
41.	11-12-2011	ದೇವ(ರವಿ)ವಾರ	ಗಡಿಹಿಂಗ್ಲಾಜ್
42.	12-12-2011	ಶಿವ(ಸೋಮ)ವಾರ	ಗೋಕಾಕ್
43.	13-12-2011	ಬಸವ(ಮಂಗಳ)ವಾರ	”
44.	14-12-2011	ಚನ್ನ(ಬುಧ)ವಾರ	”
45.	15-12-2011	ಪ್ರಭು(ಗುರು)ವಾರ	”
46.	16-12-2011	ಮಾತೃ(ಶುಕ್ರ)ವಾರ	ಶೇಗುಣಸಿ
47.	17-12-2011	ಶರಣ(ಶನಿ)ವಾರ	ಖವಟಕೊಪ್ಪ
48.	18-12-2011	ದೇವ(ಭಾನು)ವಾರ	ತಾಂವಶಿ
49.	19-12-2011	ಶಿವ(ಸೋಮ)ವಾರ	ಅಥಣಿ
50.	20-12-2011	ಬಸವ(ಮಂಗಳ)ವಾರ	ಕನಮಡಿ
51.	21-12-2011	ಚನ್ನ(ಬುಧ)ವಾರ	”
52.	22-12-2011	ಪ್ರಭು(ಗುರು)ವಾರ	ಚಡಚಣ
53.	23-12-2011	ಮಾತೃ(ಶುಕ್ರ)ವಾರ	ಬಿಜಾಪುರ
54.	24-12-2011	ಶರಣ(ಶನಿ)ವಾರ	ಗುಲಬರ್ಗಾ (ಬ.ಮಂಟಪ ನೃಪತುಂಗ ಕಾಲನಿ ಸಂಜೆ-6)
55.	25-12-2011	ದೇವ(ಭಾನು)ವಾರ	ಗುಲಬರ್ಗಾ(ಬ.ಮಂಟಪ ಮಹಾಂತನಗರ)
56.	26-12-2011	ಶಿವ (ಸೋಮ)ವಾರ	ಯಲಮಾಮಿಡಿ
57.	27-12-2011	ಬಸವ(ಮಂಗಳ)ವಾರ	ಉದಗೀರ

****

58.	28-12-2011	ಚನ್ನ(ಬುಧ)ವಾರ	ಬೀದರ
59.	29-12-2011	ಪ್ರಭು(ಗುರು)ವಾರ	ಕೋಳಾರ(ಕೆ)
60.	30-12-2011	ಮಾತೃ(ಶುಕ್ರ)ವಾರ	ಜಹಿರಾಬಾದ್
61.	31-12-2011	ಶರಣ(ಶನಿ)ವಾರ	ಹೈದ್ರಾಬಾದ್
62.	01-01-2012	ದೇವ(ರವಿ)ವಾರ	”
63.	02-01-2012	ಶಿವ(ಸೋಮ)ವಾರ	”
64.	03-01-2012	ಬಸವ(ಮಂಗಳ)ವಾರ	”
65.	04-01-2012	ಚನ್ನ(ಬುಧ)ವಾರ	”
66.	05-01-2012	ಪ್ರಭು(ಗುರು)ವಾರ	”
67.	06-01-2012	ಮಾತೃ(ಶುಕ್ರ)ವಾರ	”
70.	07-01-2012	ಶರಣ(ಶನಿ)ವಾರ	”
71.	08-01-2012	ದೇವ(ಭಾನು)ವಾರ	”
72.	09-01-2012	ಶಿವ(ಸೋಮ)ವಾರ	”
73.	10-01-2012	ಬಸವ(ಮಂಗಳ)ವಾರ	ಕೂಡಲ ಸಂಗಮಕ್ಕೆ ಪ್ರಯಾಣ

ದೃಶ್ಯ ಮಾಲಿಕೆಯ ಸಿ.ಡಿ.ಗಳು

ವಿಶ್ವಗುರು ಬಸವಣ್ಣನವರ 816ನೆಯ ಲಿಂಗೈಕ್ಯ ಸಂಸ್ಮರಣೆ- ಬಸವ ಪಂಚಮಿಯಂದು ಬೆಂಗಳೂರಿನ ಪುಟ್ಟಣ್ಣಶೆಟ್ಟಿ ಟೌನ್‌ಹಾಲ್‌ದಲ್ಲಿ ನಡೆದ ಸಮಾರಂಭದಲ್ಲಿ ಕೆಲವು ನೃತ್ಯಗಳನ್ನು ಚಿತ್ರೀಕರಿಸಲಾಯಿತು. ಅವುಗಳನ್ನು ಈಗ ದೃಶ್ಯ-ಶ್ರಾವ್ಯ ತಟ್ಟೆಯಾಗಿ ಹೊರತರಲಾಗಿದೆ.

1. ಬಸವ ದರ್ಶನ - ವಿಡಿಯೋ ಸಿ.ಡಿ. - ಜಾನಪದ ಕವಿಗಳು ಕಂಡಂತೆ ಎಲ್ಲರಿಗೆ ಬೆಲ್ಲಾದ ಕಲ್ಯಾಣ ಬಸವಯ್ಯ - ಸಮಗ್ರ ಜೀವನ ಚರಿತ್ರೆಯ ಸಿ.ಡಿ.ಇರದಲ್ಲಿ ಇನ್ನೂ ಕೆಲವು ಬಸವ ಸ್ತುತಿ ಗೀತೆಗಳಿವೆ. ಅವಧಿ-1 ಗಂಟೆ 26 ನಿಮಿಷ ಬೆಲೆ : 60 ರೂ, ಅಂಚೆ ವೆಚ್ಚ 10ರೂ
2. ಶರಣ ಗೀತಾಂಜಲಿ - ವಿಡಿಯೋ ಸಿ.ಡಿ. - ಪೂಜ್ಯ ಮಾತಾಜಿಯವರು ಬರೆದ ಅನೇಕ ಹಾಡುಗಳಿಗೆ ನೃತ್ಯಾಭಿನಯವನ್ನು ಒಳಗೊಂಡಿದೆ. ಅವಧಿ-1 ಗಂಟೆ 36 ನಿಮಿಷ
ಬೆಲೆ : 70 ರೂ, ಅಂಚೆ ವೆಚ್ಚ 10ರೂ
3. ಶರಣ ದರ್ಶನ - ವಿಡಿಯೋ ಸಿ.ಡಿ. - ಪೂಜ್ಯ ಮಾತಾಜಿಯವರು ಬರೆದ ಅನೇಕ ಹಾಡುಗಳಿಗೆ, ಅಕ್ಕನ ವಚನಗಳು, ಸಿದ್ದರಾಮೇಶ್ವರ ಕುರಿತ ಹಾಡು , ಪೂಜ್ಯ ಮಾತಾಜಿ ಕುರಿತು ಲಾವಣಿ ಇವುಗಳ ನೃತ್ಯರೂಪಕಗಳಿವೆ. ಅವಧಿ-1 ಗಂಟೆ 53 ನಿಮಿಷ ಬೆಲೆ : 85 ರೂ, ಅಂಚೆ ವೆಚ್ಚ-10ರೂ


ಮೂರನ್ನು ತರಿಸಿಕೊಳ್ಳುವುದಾದರೆ ಅಂಚೆ ವೆಚ್ಚ ಸೇರಿ ಒಟ್ಟು ಬೆಲೆ 235ರೂ


4. ಬಸವ ವಚನಾಮೃತ-ಭಾಗ 6, ಗುರು ಬಸವಣ್ಣನವರ 541ನೆಯ ವಚನದಿಂದ 648 ವಚನದವರೆಗೆ ಪೂಜ್ಯ ಮಾತಾಜಿ ಬರೆದ ವ್ಯಾಖ್ಯಾನ ಒಳಗೊಂಡ ಪುಸ್ತಕ - ಬೆಲೆ 25ರೂ, ಅಂಚೆ ವೆಚ್ಚ 10ರೂ

ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ, ಬೆಂಗಳೂರು, 2035, 20ನೇ ಮುಖ್ಯರಸ್ತೆ, 2ನೇ ಬ್ಲಾಕ್,
ರಾಜಾಜಿನಗರ, ಬೆಂಗಳೂರು-560010, ದೂರವಾಣಿ : 080-23131476

ಶರಣ ಭೂಮಿ ಬಸವ ಕಲ್ಯಾಣದಲ್ಲಿ ವಿವಿಧ ಯೋಜನೆಗಳು

ಬಸವ ಧರ್ಮ ಪೀಠ (ರಿ.) ಟ್ರಸ್ಟ್ ವತಿಯಿಂದ ಬಸವ ಕಲ್ಯಾಣದಲ್ಲಿ ಶರಣ ಸಂಸ್ಕೃತಿಯ ಪುನರುತ್ಥಾನ ಮಾಡಬೇಕೆಂದು ಸಂಕಲ್ಪಿಸಿ ದಿ. 21-12-2001ರಂದು ರಾಷ್ಟ್ರೀಯ ಹೆದ್ದಾರಿ 9 ರಿಂದ ಬಸವ ಕಲ್ಯಾಣಕ್ಕೆ ಹೋಗುವ ಮುಖ್ಯ ರಸ್ತೆಯ ಬದಿಗೆ 3 ಎಕರೆ ಜಮೀನನ್ನು ಖರೀದಿಸಲಾಯಿತು. ಪುನಃ ಹದಿನೇಳೂವರೆ ಎಕರೆ ಖರೀದಿಸಿ ಬಸವ ಮಹಾಮನೆ ಎಂಬ ಹೆಸರಿನಲ್ಲಿ ಮಠವನ್ನು ಸ್ಥಾಪಿಸಿರುವುದೇ ಅಲ್ಲದೆ ನಿತ್ಯ ದಾಸೋಹ, ಹುಣ್ಣಿಮೆ ಕಾರ್ಯಕ್ರಮ ನಡೆಸಿಕೊಂಡು ಬರಲಾಗುತ್ತಿದೆ. 12ನೆಯ ಶತಮಾನದ ಧಾರ್ಮಿಕ ವೈಭವ 21ನೆಯ ಈ ಶತಮಾನದಲ್ಲಿ ನಡೆಯುವಂತೆ ಕಾರ್ಯೋನ್ಮುಖವಾಗಬೇಕಾಗಿದೆ. ಅದು ಶರಣರ ಸಂಕಲ್ಪ ಕೂಡ. ಹೇಗೆಂದರೆ, ಬಸವಣ್ಣನವರು ಕಲ್ಯಾಣವನ್ನು ಗಡಿಪಾರಾಗಿ ಬಿಟ್ಟು ಹೋದ 770 ವರ್ಷಗಳ ನಂತರ ನಾವು ಬರುತ್ತೇವೆ ಎಂದು ಭವಿಷ್ಯವಾಣಿ ನುಡಿದಿದ್ದಾರೆ. ಜಗ ಬದುಕಲಿ, ಜನ ಬದುಕಲಿ ಎಂದು ಆದಿ ಶರಣರು ವಚನಗಳನ್ನು ರಚಿಸಿದುದು ಮಾತ್ರವಲ್ಲ ವಚನ ಸಾಹಿತ್ಯವನ್ನು ನಾಶ ಮಾಡಬೇಕೆಂದು ಜಾತಿವಾದಿಗಳು ಪಣ ತೊಟ್ಟಾಗ, ತಮ್ಮ ಪ್ರಾಣವನ್ನು ಪಣಕ್ಕಿಟ್ಟು, ಹೋರಾಡಿ ವಚನ ವಾಙ್ಮಯವನ್ನು ರಕ್ಷಿಸಿದರು. ಆದಿ ಶರಣರ ಆ ಬಲಿದಾನದ ಋಣವನ್ನು ತೀರಿಸಬೇಕಾದ್ದು ಪ್ರತಿಯೊಬ್ಬ ಅನುಯಾಯಿಯ ಅಭಿಮಾನದ ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿ ಬಸವ ಧರ್ಮ ಪೀಠ ಟ್ರಸ್ಟಿನ ಬಸವ ಕಲ್ಯಾಣ ಶಾಖೆಯಲ್ಲಿ ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ.



ಈಗಾಗಲೇ ಪೂರ್ಣಗೊಂಡಿರುವ ಕಾಮಗಾರಿಗಳು



1. ಬಸವ ಮಹಾಮನೆಯ ಕಾರ್ಯಾಲಯ
2. ಪ್ರಾರ್ಥನಾ ಮಂದಿರ
3. 20 ಕೊಠಡಿಗಳ ಶರಣ ಧಾಮ
4. ದೊಡ್ಡ ಬಾವಿ
5. ನೀರಿನ ಟ್ಯಾಂಕ್
6. ಬಸವಾನುಗ್ರಹ ಧಾಮ – ಬೃಹತ್ತಾದ ಗವಿ, ಅದರಲ್ಲಿ ಎಂಟು ಜನ ಶರಣರ ಮೂರ್ತಿಗಳನ್ನು ಇಡಲಾಗಿದೆ.
7. ಹರಳಯ್ಯ ತೀರ್ಥ: ವಿಶಾಲವಾದ ನೀರಿನ ಸಂಗ್ರಹಾಗಾರ ; ಅದರ ಮಧ್ಯೆ ಹರಳಯ್ಯ – ಕಲ್ಯಾಣಮ್ಮ – ಲಾವಣ್ಯವತಿಯ ಮೂರ್ತಿಗಳು.
8. ಒಕ್ಕಲಿಗ ಮುದ್ದಣ್ಣ ಮುಂತಾದ ಕೆಲವು ಶರಣರ ಮೂರ್ತಿಗಳು.

ನಿರ್ಮಾಣ ಹಂತದಲ್ಲಿರುವ ಕೆಲಸಗಳು



1. ಅಕ್ಕಮಹಾದೇವಿ ಗವಿ
2. ಮ್ಯೂಸಿಯಮ್
3. 24 ಅಡಿಯ ಎರಡು ಅಂತಸ್ತಿನ ಅಡಿ ಪೀಠ ಸಿದ್ಧವಾಗಿದೆ. 108 ಅಡಿ ಬಸವ ಮೂರ್ತಿಯ ಬೆನ್ನು ಹುರಿಭಾಗ (Shaft) 108 ಅಡಿಯಷ್ಟು ಏರಿದೆ. ಮೂರ್ತಿಯ ನಿರ್ಮಾಣ ತ್ವರಿತಗತಿಯಲ್ಲಿ ಸಾಗಿದೆ.

4. ಅನಾಥಾಲಯ ಕಟ್ಟಡ ನಿರ್ಮಾಣ


ಅಕ್ಕನಾಗಲಾಂಬಿಕಾ ಅನಾಥಾಲಯ ಮತ್ತು ಮುಕ್ತಾಯಕ್ಕ ಮ್ಯಾಟ್ರಿಕ್ ಪೂರ್ವ ವಸತಿ ನಿಲಯಗಳನ್ನು ನಡೆಸಲಾಗುತ್ತಿದ್ದು ಅನೇಕರಿಗೆ ಆಶ್ರಯ ನೀಡಲಾಗಿದೆ.

ಮುಂದಿನ ಯೋಜನೆಯ ಪಕ್ಷಿನೋಟ

1. ಬಸವೇಶ್ವರ ಸಮುದಾಯ ಭವನ : ಯಾತ್ರಿಕರಿಗೆ ಉಚಿತವಾಗಿ ತಂಗಲು ವಿಶಾಲವಾದ ಹಾಲ್ ಮತ್ತು ಕೋಣೆಗಳು
2. ಶರಣ ಧಾಮ : ಬರುವ ಯಾತ್ರಿಕರಿಗಾಗಿ ಉಳಿಯಲು ವಸತಿ ಗೃಹವನ್ನು ನಿರ್ಮಾಣ ಮಾಡುವುದು. ಸಿಂಗಲ್ ಕೋಣೆ ನಿರ್ಮಾಣಕ್ಕೆ 1,00,000 (ಒಂದುಲಕ್ಷ)ರೂ., ಡಬ್ಬಲ್ ಕೋಣೆ ನಿರ್ಮಾಣಕ್ಕೆ 1,25,000 (ಒಂದು ಲಕ್ಷದ ಇಪ್ಪತ್ತೈದು ಸಾವಿರ) ರೂ. ದಂತೆ ಪಡೆಯಲಾಗುವುದು.

   ಒಂದು ಬಸ್ ಜನ ಉಳಿಯುವಂತೆ ಸಾಮೂಹಿಕ ವಸತಿ ಗೃಹ (Dormitory) ಕಟ್ಟಿಸಲು 2,00,000 (ಎರಡು ಲಕ್ಷ)ರೂ. ಗಳನ್ನು ದಾನಿಗಳಿಂದ ಪಡೆಯಲಾಗುವುದು.
3. 108 ಅಡಿ ಎತ್ತರದ ಬಸವಣ್ಣನವರ ಬೃಹತ್ ಪುತ್ಥಳಿ ನಿರ್ಮಾಣ: ಅಂದಾಜು ವೆಚ್ಚ 3 ಕೋಟಿ ರೂಪಾಯಿಗಳು.
4. ಹುತಾತ್ಮರಾದ ಹರಳಯ್ಯ ಮಧುವರಸರ ಎಳೆಹೂಟೆ ಶಿಕ್ಷೆಯ ಸ್ಮಾರಕ
5. ವಿಶ್ವಗುರು ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರನ್ನು ನೆನಪಿಸುವಂತೆ ಒಂದು ಬೃಹತ್ ಸ್ಮಾರಕ ರಚನೆ ಇತ್ಯಾದಿ.
6. ಗುರು ಭವನ – ಪೂಜ್ಯ ಲಿಂಗಾನಂದ ಸ್ವಾಮಿಗಳ ಸ್ಮಾರಕ




ಶರಣ ಬಂಧುಗಳೇ,



ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮ ಗುರುಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವಾಯತರೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗಬೇಕು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು 1988ರಿಂದ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ನಡೆಸಿಕೊಂಡು ಬರಲಾಗುತ್ತಿದೆಯಷ್ಟೆ. ಅದೇ ರೀತಿ ಶರಣ ಭೂಮಿ ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವ ಎಂಬ ಧಾರ್ಮಿಕ ಸಮಾವೇಶವನ್ನು 2002 ರಿಂದಲೂ ನಡೆಸಿಕೊಂಡು ಬರಲಾಗುತ್ತಿದೆ.

ವಿಶ್ವಗುರು ಬಸವಣ್ಣನವರ ಬೃಹತ್ ಪುತ್ಥಳಿ ನಿರ್ಮಾಣ ಯೋಜನೆಗೆ ಚಾಲನೆ

ಬೀದರ್ ಜಿಲ್ಲೆಯ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ಕ್ರಾಂತಿ ಪುರುಷ ಬಸವಣ್ಣನವರ ನೇತೃತ್ವದಲ್ಲಿ ಅಸಂಖ್ಯಾತ ಶರಣರನ್ನು ಆಕರ್ಷಿಸಿದ ಶರಣ ಭೂಮಿ. ಜಗತ್ತಿನ ಎಲ್ಲ ಭಾಗಗಳಿಂದಲೂ ಪ್ರವಾಸಿಗರನ್ನು ಚಿಂತನಶೀಲರನ್ನು ಆಕರ್ಷಿಸುವಂತೆ ಇಂದು ಅದು ಪುನರ್ ನಿರ್ಮಾಣವಾಗಬೇಕಾಗಿದೆ. ಈ ಯೋಜನೆಯ ಅಂಗವಾಗಿ 108 ಅಡಿ ಎತ್ತರದ ಬಸವಣ್ಣನವರ ಬೃಹತ್ ಪುತ್ಥಳಿಯೊಂದನ್ನು ಮತ್ತು ಅನೇಕ ಶರಣರ ಮೂರ್ತಿಗಳನ್ನು, ಶರಣರಿಗೆ ಸ್ಮಾರಕಗಳನ್ನು ನಿರ್ಮಾಣ ಮಾಡುವ ಯೋಜನೆಯನ್ನು ರೂಪಿಸಲಾಗಿದೆ.

ವಿಶ್ವಗುರು ಬಸವಣ್ಣನವರ ಕಾರಣಿಕೋತ್ಸವದ ದಿನ 1-9-2004ರಂದು ಬಸವ ಮಹಾಮನೆಯ ಶರಣ ಶೈಲದ ಮೇಲೆ 108 ಅಡಿ ಪುತ್ಥಳಿಯ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಯಿತು. 60x80 ಅಡಿ ಉದ್ದ – ಅಗಲದ 2 ಅಂತಸ್ತುಗಳ 24 ಅಡಿ ಎತ್ತರದ ಪೀಠವು ಪೂರ್ಣಗೊಂಡಿದೆ. ಅದರ ಮೇಲೆ ಬಸವ ಮೂರ್ತಿಯ ಮುಖ್ಯ ಭಾಗವಾದ ಬೆನ್ನುಹುರಿ (ಶ್ಯಾಫ್) ನೂರೆಂಟು ಅಡಿ ಎತ್ತರಕ್ಕೆ ಏರಿದೆ. 2011ರ ಅಕ್ಟೋಬರದಲ್ಲಿ ಮುಖದ ಕೆಲಸವು ಪ್ರಾರಂಭವಾಗಲಿದೆ. ತ್ವರಿತಗತಿಯಲ್ಲಿ ಕೆಲಸವು ನಡೆಯುತ್ತಲಿದೆ.

108 ಅಡಿ ಮೂರ್ತಿಯ ನಿರ್ಮಾಣಕ್ಕೆ ಅಂದಾಜು ವೆಚ್ಚ 3 ಕೋಟಿ ಎಂದು ಶಿಲ್ಪಿಗಳು ಎಸ್ಟಿಮೇಷನ್ ಮಾಡಿದ್ದಾರೆ. ಆದರೆ ಇದಕ್ಕೆ ಪೂರಕವಾಗಿ ಇನ್ನೂ ಕೆಲವು ವೆಚ್ಚಗಳು ಬರುತ್ತವೆ. ಮಾತ್ರವಲ್ಲದೆ ಶರಣರ ಮೂರ್ತಿ, ಸ್ಮಾರಕ, ಧ್ಯಾನ ಮಂಟಪ, ಗವಿ ಇತ್ಯಾದಿಗಳು ಸೇರಿ 50 ಲಕ್ಷ. ಹೀಗೆ ಸುಮಾರು ಮೂರೂವರೆ ಕೋಟಿ ರೂಪಾಯಿಗಳ ಯೋಜನೆ ರೂಪಿಸಲಾಗಿದೆ. ಈ ಯೋಜನೆಯನ್ನು ಸಾಕಾರಗೊಳಿಸಲು 1. ಬಸವ ಧರ್ಮ ಪೀಠ ಟ್ರಸ್ಟ್, 2. ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್, 3. ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಮೂರೂ ಸೇರಿ ಕಾರ್ಯ ಮಾಡಲು, ದೇಣಿಗೆ ಸಂಗ್ರಹಿಸಲು ನಿರ್ಧರಿಸಿವೆ.

ದೇಣಿಗೆಯ ಬಗೆಗಳು

1. ಅವರವರ ಶಕ್ತ್ಯಾನುಸಾರ ಭಕ್ತಿಯಿಂದ ಎಷ್ಟು ಕಾಣಿಕೆ ಕೊಟ್ಟರೂ ಸ್ವೀಕರಿಸಲಾಗುವುದು.
2. 11,000 (ಹನ್ನೊಂದು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು (ಡೋನರ್ ಬೋರ್ಡ್) ದಾನಿಗಳ ಫಲಕದಲ್ಲಿ ಬರೆಸಲಾಗುವುದು.
3. 25,000 (ಇಪ್ಪತ್ತೈದು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಸಾಮೂಹಿಕವಾಗಿ ದಾನಿಗಳ ಶಿಲಾಫಲಕದಲ್ಲಿ ಕೆತ್ತಿಸಲಾಗುವುದು.
4. 50,000 (ಐವತ್ತು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಶಿಲೆಯಲ್ಲಿ ಕೆತ್ತಿಸಿ, ಪುತ್ಥಳಿಯ ಕೆಳಗಿನ ಪೀಠದ ಮೂರು ಬದಿಗಳಲ್ಲಿ (ಹಿಂದೆ, ಎಡ ಮತ್ತು ಬಲಪಕ್ಕ) ಬರುವ ಸ್ಥಳಗಳಲ್ಲಿ ಒಂದು ಕಡೆ ಹಾಕಿಸಲಾಗುವುದು.

ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಲಿಂಗದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪು ರೇಷೆ ಹಾಕಿದುದು ಕೂಡಲ ಸಂಗಮದಲ್ಲಿ. ಆ ನೀಲನಕ್ಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ.

"ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಸಂಗನ ಬಸವಣ್ಣ ಬಂದು ಕಲ್ಯಾಣದಲ್ಲಿ ಮಹಾಮನೆಯ ಕಟ್ಟಿದಡೆ ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತು"

ಎಂದು ಬಸವಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, "ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ" ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮ ನಾಮ ಸಂವತ್ಸರ (ಕ್ರಿ.ಶ. 1160)ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ.1196)ದವರೆಗೆ ಶ್ರೀ ಗುರುಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy Land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು 2002ನೆಯ ಇಸವಿಯ ಮೇ 1, 2 ಮತ್ತು 3 ರಂದು ಮೊಟ್ಟ ಮೊದಲನೆಯ ಕಲ್ಯಾಣಪರ್ವ ಸಮಾಗಮವನ್ನು ಸಂಯೋಜಿಸಲಾಗಿತ್ತು. "ಕಾಯಕವೇ ಕೈಲಾಸ" ಎಂಬ ದುಡಿಮೆಯ ಸೂತ್ರವನ್ನು ಸಾರಿ ದುಡಿಮೆಗೆ ದಿವ್ಯತ್ವ ನೀಡಿ, ಸಮಾಜವಾದದ ಆಧಾರ ಸ್ತಂಭವಾದ ಕಾಯಕಕ್ಕೆ ಪಟ್ಟ ಕಟ್ಟಿದ ಕ್ರಾಂತಿಪುರುಷ ಬಸವಣ್ಣನವರು ಕಾಯಕ -ದಾಸೋಹ-ಪ್ರಸಾದ ಎಂಬ ತ್ರಿತತ್ತ್ವವನ್ನು ಸಾರಿ ಜಾತಿ-ವರ್ಣ-ವರ್ಗ ರಹಿತ ಧರ್ಮ ಸಹಿತ ಕಲ್ಯಾಣ ರಾಜ್ಯವನ್ನು ಕಟ್ಟಿದುದು ಬಸವ ಕಲ್ಯಾಣದ ಪುಣ್ಯಭೂಮಿಯಲ್ಲೇ.

ಇಂತಹ ಕಲ್ಯಾಣದಲ್ಲಿ ಮರಣವೇ ಮಹಾನವಮಿ ಎಂಬ ಬಸವ ವಾಣಿಗೆ ಅನುಸಾರವಾಗಿ ನಡೆದ ಕಲ್ಯಾಣ ಕ್ರಾಂತಿಯ ಸಂಸ್ಮರಣೆಗಾಗಿ 2008ನೆಯ ಇಸವಿಯಿಂದ ದಸರಾ (ನವರಾತ್ರಿ)ನಂತರದಲ್ಲಿ ಆಶ್ವಯುಜ ಮಾಸದ ತ್ರಯೋದಶಿ, ಚತುರ್ದಶಿ ಮತ್ತು ಹುಣ್ಣಿಮೆಯಂದು ಕಲ್ಯಾಣ ಪರ್ವವನ್ನು ನಡೆಸಲಾಗುತ್ತಿದೆ.



5. 1,00,000 (ಒಂದು ಲಕ್ಷ) ರೂ. ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಶಿಲೆಯಲಿ ಕೆತ್ತಿಸಿ, ಮೂರ್ತಿಯ ಕೆಳಗಿನ ಪೀಠದ ಮೂರು ಬದಿಗಳಲ್ಲಿ ಬರುವ ಸ್ಥಳಗಳಲ್ಲಿ ಒಂದು ಕಡೆ ಮ್ಯೂಸಿಯಮ್‌ನಲ್ಲಿ ಒಳಗೆ ಹಾಕಿಸಲಾಗುವುದಲ್ಲದೆ ದಾನಿಗಳ ಒಂದು ಫೋಟೋ ಸಹ ಪ್ರದರ್ಶಿಸಲಾಗುವುದು.

6. **ಗುರು ಬಸವಣ್ಣನವರ ಜೀವನ ಚರಿತ್ರೆ :** ಬಸವ ಮೂರ್ತಿಯ ಕೆಳಗಿನ ಪೀಠದ ಎರಡು ಅಂತಸ್ತುಗಳಲ್ಲಿ ಗುರು ಬಸವಣ್ಣನವರ ಸಮಗ್ರ ಜೀವನ ಚರಿತ್ರೆ ಚಿತ್ರಿಸುವ 3D ಮೂರ್ತಿಗಳನ್ನು ಕೂರಿಸಲಾಗುತ್ತದೆ. 32 ಪ್ರಮುಖ ಘಟನೆಗಳನ್ನು ಆಯ್ದುಕೊಳ್ಳಲಾಗಿದೆ. ಇದಕ್ಕೆ ಧ್ವನಿ ಮತ್ತು ಬೆಳಕಿನ ವ್ಯವಸ್ಥೆ ಸಹ ಇರುತ್ತದೆ. ಒಂದೊಂದು ಘಟನೆ ಚಿತ್ರಿಸಲು 1,50,000 (ಒಂದೂವರೆ ಲಕ್ಷ) ರೂಗಳ ಖರ್ಚು ಬರುತ್ತದೆ. ಕೊಟ್ಟ ದಾನಿಗಳ ಹೆಸರಿನ ನಾಮಫಲಕವನ್ನು ಆ ಘಟನೆಯ ಚಿತ್ರದ ಮುಂಬದಿಯಲ್ಲಿ ದಾನಿಗಳ ಭಾವಚಿತ್ರ ಸಹಿತವಾಗಿ ಪ್ರದರ್ಶಿಸಲಾಗುವುದು.

7. **ಬಾಗಿಲುವಾಡ:** ಬಸವ ಧ್ಯಾನ ಮಂಟಪದ ಗವಿಯಲ್ಲಿ ಶರಣರ ಮೂರ್ತಿ ಇಡಲಾಗಿದ್ದು ಈ ಕೋವಿಗಳಿಗೆ ಗ್ರಾನೈಟಿನ ಬಾಗಿಲು ಚೌಕಟ್ಟು ಕೂರಿಸಲಾಗುತ್ತಿದೆ. ಇದಕ್ಕಾಗಿ 25000 ರೂಗಳನ್ನು ಕೊಟ್ಟ ದಾನಿಗಳ ಹೆಸರನ್ನು ಬಾಗಿಲ ಚೌಕಟ್ಟಿನ ಮೇಲೆ ಕೆತ್ತಿಸಲಾಗುವುದು.

8. **108 ಮೆಟ್ಟಿಲ ಯೋಜನೆ :** ನೆಲ ಮಟ್ಟದಿಂದ ಬಸವ ಮೂರ್ತಿಯ ಪೀಠದವರೆಗೆ 108 ಮೆಟ್ಟಿಲು, ಇಳಿಯಲು 108 ಮೆಟ್ಟಿಲು ಮಾಡಲಾಗುತ್ತಿದೆ. ಇವಕ್ಕೆ ಗ್ರಾನೈಟ್ ಹಾಕಿಸಲಾಗುವುದು. ಒಂದೊಂದು ಮೆಟ್ಟಿಲಿನ ಸಂಪೂರ್ಣ ವೆಚ್ಚ 15,000 (ಹದಿನೈದು ಸಾವಿರ)ರೂ ಬರುತ್ತಿದೆ. ಕೊಟ್ಟ ದಾನಿಗಳ ಹೆಸರನ್ನು ಮೆಟ್ಟಿಲಿನ ಕಲ್ಲಿನ ಮೇಲೆ ಕೆತ್ತಿಸಲಾಗುವುದು.


ವಿಶೇಷ ಸೂಚನೆ

ಈ ಯೋಜನಾ ಪತ್ರ ನೋಡಿದ ನೀವೂ ಹೆಚ್ಚಿನ ಪ್ರಮಾಣದಲ್ಲಿ ಕಾಣಿಕೆ ಕೊಡಲು, ನಿಮ್ಮ ಬಂಧು-ಮಿತ್ರರಿಂದ ಕೊಡಿಸಲು ಆಸಕ್ತಿವಹಿಸಬೇಕಾಗಿ ವಿನಂತಿಸುತ್ತೇವೆ. ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ 80ಜಿ ಇನ್‌ಕಮ್ ಟ್ಯಾಕ್ಸ್ ರಿಯಾಯಿತಿಯ ಸೌಲಭ್ಯ ಪಡೆದಿದ್ದು, ದಾನಿಗಳು ಇದರ ಸದುಪಯೋಗ ಪಡೆದುಕೊಳ್ಳಬಹುದು. ಈ ಸೌಲಭ್ಯವು ನವೀಕರಣಗೊಂಡು ಚಾಲ್ತಿಯಲ್ಲಿದೆ ಎಂಬುದನ್ನು ದಾನಿಗಳ ಗಮನಕ್ಕೆ ತರಲು ಬಯಸುತ್ತೇವೆ.

ಕೇಂದ್ರ ಸಂಸ್ಥೆ:
ಬಸವ ಧರ್ಮ ಪೀಠ, ಬಸವ ಮಂಟಪ,
2035, 20ನೇ ಮುಖ್ಯ ರಸ್ತೆ
2ನೇ ಬ್ಲಾಕ್, ರಾಜಾಜಿ ನಗರ
ಬೆಂಗಳೂರು-560010
ದೂರವಾಣಿ: 080-23131476




ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ
ಬಸವ ಮಹಾಮನೆ, ಮುಖ್ಯ ರಸ್ತೆ
ಬಸವ ಕಲ್ಯಾಣ, ಜಿ॥ ಬೀದರ
ದೂರವಾಣಿ: 9448732456, 9480497346











CPMG/KA/BGW 50/2009-2011,RNI 19980/70, POSTED AT MBC BANGALORE GPO
ON 3,10,20 OF EVERY MONTH. LICENCED TO POST WITHOUT PRE PAYMENT
WPP-17, PAGES 32+4(COVER PAGES)

ಬಸವ ಕಲ್ಯಾಣದ ಬಸವ ಮಹಾಮನೆಯ ಶರಣ ಶೈಲದಲ್ಲಿ ನಿರ್ಮಾಣಗೊಳ್ಳುತ್ತಿರುವ 108 ಅಡಿಯ ಬಸವ ಪುತ್ಥಳಿ

